ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಫೆಬ್ರವರಿ 13, 2023

ಸಂಪುಟ : 49 ಸಂಚಿಕೆ : 272 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

## ತಾಪಮಾನ ತಡೆಗೆ ಚಂದ್ರನ ಮೇಲೆ ದೂಳಿನ ಮೋಡ!

### ಅಮೆರಿಕ ವಿಜ್ಞಾನಿಗಳಿಂದ ಪ್ರಸ್ತಾಪ

ಕ್ಯಾನ್‌ಬೆರಾ, ಫೆ. 12 – ಚಂದ್ರನ ಮೇಲೆ ಬೃಹತ್ ದೂಳಿನ ಮೋಡಗಳನ್ನು ಸೃಷ್ಟಿಸುವ ಮೂಲಕ ತಾಪಮಾನ ಹೆಚ್ಚಳ ತಡೆಯ ಸಾಧ್ಯತೆ ಬಗ್ಗೆ ಅಮೆರಿಕದ ವಿಜ್ಞಾನಿಗಳು ಪ್ರಸ್ತಾಪಿಸಿದ್ದಾರೆ.

ನಾವೇನೂ ಪರಿಸರ ಬದಲಾವಣೆ ಇಲ್ಲವೇ ರಾಕೆಟ್ ವಿಜ್ಞಾನದ ಪರಿಣಿತರಲ್ಲ. ಆದರೆ, ವಿವಿಧ ರೀತಿ ದೂಳುಗಳಿಂದ ಆಗುವ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದೇವೆ ಎಂದು ಹಾರ್ವರ್ಡ್ - ಸ್ಮಿತ್ಸೋನಿಯನ್ ಸೆಂಟರ್ ಫಾರ್ ಅಸ್ಟ್ರೋಫಿಸಿಕ್ಸ್ ಪ್ರಾಧ್ಯಾಪಕ ಬೆಂಜಮಿನ್ ಬ್ರೋಮ್ಲಿ ತಿಳಿಸಿದ್ದಾರೆ.

ಚಂದ್ರನ ಮೇಲೆ ದೂಳು ಸೃಷ್ಟಿಸಿ ಅದನ್ನು ಸೂರ್ಯನ ಕಡೆ ಚಾಚುವಂತೆ ಮಾಡಬಹುದು. ಈ ದೂಳು ವಾರದವರೆಗೆ ಸೂರ್ಯ ಹಾಗೂ ಭೂಮಿಯ ಮಧ್ಯೆ ಇರುತ್ತದೆ. ಇದರಿಂದ ಭೂಮಿಯ ಮೇಲೆ ಬೀಳುವ ಸೂರ್ಯನ ಬೆಳಕಿನ ಪ್ರಮಾಣ ಶೇ.2ರಷ್ಟು ಕಡಿಮೆಯಾಗುತ್ತದೆ.

ಈ ಯೋಜನೆಗಾಗಿ ಚಂದ್ರನ ಮೇಲೆ ಪ್ರತಿ ವರ್ಷ 10 ದಶಲಕ್ಷ ಟನ್ ದೂಳು ಹರಡಬೇಕಾಗುತ್ತದೆ ಎಂದು ಬ್ರೋಮ್ಲಿ ನೇತೃತ್ವದ ಅಧ್ಯಯನ ತಂಡ ತಿಳಿಸಿದೆ.

ಆದರೆ, ಈ ಯೋಜನೆ ಹೇಳಿದಷ್ಟು ಸುಲಭವೇ ಎಂಬ ಪ್ರಶ್ನೆಗಳಿವೆ. ಸೂರ್ಯನ



ಕಿರಣಗಳು ಭೂಮಿಗೆ ಬರುವುದಕ್ಕೆ ತಡೆ ಹಾಕುವ ಯೋಚನೆಗಳು ಹೊಸದೇನೂ ಅಲ್ಲ. ಇದಕ್ಕೆ ಸೋಲಾರ್ ಜಿಯೋ ಇಂಜಿನಿಯರಿಂಗ್ ಎಂಬ ಹೆಸರಿದೆ.

ಭೂಮಿಯ ಮೇಲ್ಪದರದ ಸುತ್ತ ತೆಳುವಾದ ಕಣಗಳನ್ನು ಹರಡುವ ಮೂಲಕ ಸೂರ್ಯನ ಕಿರಣಗಳಿಗೆ ತಡೆ ಹಾಕುವುದು ಅತಿ ಹೆಚ್ಚಿನ ಚರ್ಚೆಗೆ ಕಾರಣವಾಗಿದೆ.

ಆದರೆ, ಈ ರೀತಿಯ ಪ್ರಯತ್ನಗಳು ಮಳೆ ಮೇಲೆ ಪರಿಣಾಮ ಬೀರುತ್ತವೆ. ಇದರಿಂದ ಓಜೋನ್ ಪದರಕ್ಕೂ ಹಾನಿಯಾಗುವ ಅಪಾಯ ಇದೆ.

ಚಂದ್ರನ ಮೇಲೆ ದೂಳು ಹರಡುವುದರಿಂದ ಈ ರೀತಿಯ ಸಮಸ್ಯೆಗಳು ಇರುವುದಿಲ್ಲ. ಚಂದ್ರನ ಮೇಲೆ ದೂಳು ಅಪಾರ ಪ್ರಮಾಣದಲ್ಲಿದೆ. ಚಂದ್ರನ ಗುರುತ್ವಾಕರ್ಷಣ ಶಕ್ತಿಯೂ ಕಡಿಮೆ. ಹೀಗಾಗಿ ದೂಳು ಹರಡಿದರೆ ಅದು ಹೆಚ್ಚು ಕಾಲ ವಾತಾವರಣದಲ್ಲಿ ಇರಲಿದೆ.

ಆದರೆ, ಈ ಯೋಜನೆ ಜಾರಿಗೆ ತರಲು ಚಂದ್ರನ ಮೇಲೆ ಸಾಕಷ್ಟು ಸೌಲಭ್ಯಗಳನ್ನು ಸೃಷ್ಟಿಸಬೇಕಾಗುತ್ತದೆ. ಕಳೆದ 50 ವರ್ಷಗಳಿಂದ ಮನುಷ್ಯ ಚಂದ್ರನ ಮೇಲೆ ಕಾಲಿಟ್ಟಿಲ್ಲ. 2028ರ ವೇಳೆಗೆ ಚಂದ್ರನ ಮೇಲೆ ನೆಲೆ ಸ್ಥಾಪಿಸುವ ಯೋಜನೆ ಹೊಂದಿರುವುದಾಗಿ ಚೀನಾ ತಿಳಿಸಿದೆ. ನಂತರ 2034ರಲ್ಲಿ ಚಂದ್ರನ ನೆಲೆ ನಿರ್ಮಿಸುವ ಯೋಜನೆ ಅಮೆರಿಕದ್ದಾಗಿದೆ. ಹೀಗಾಗಿ ಅಲ್ಲಿ ಗಣಿಗಾರಿಕೆ ನಡೆಸಿ ದೂಳು ಹರಡಲು ದಶಕಗಳೇ ಬೇಕಾಗಲಿವೆ.

ಅಲ್ಲದೇ ಬಾಹ್ಯಕಾಶ ಹಾಗೂ ಚಂದ್ರನ ಕುರಿತು ಸ್ಥಿರ ನೀತಿಗಳಿಲ್ಲ. (3ನೇ ಪುಟಕ್ಕೆ)




**ನಾಟಿ ಚುರುಕು**

ಜಿಲ್ಲೆಯಲ್ಲಿ ಭತ್ತದ ನಾಟಿ ಕಾರ್ಯ ಚುರುಕುಗೊಂಡಿದೆ. ದಾವಣಗೆರೆ ಬಳಿಯ ಬಾತಿ ಗ್ರಾಮದಲ್ಲಿ ನಾಟಿ ಕಾರ್ಯದಲ್ಲಿ ನಿರತರಾಗಿರುವ ಕೃಷಿ ಕಾರ್ಮಿಕರು

## ಸ್ಮಾರ್ಟ್ ಸಿಟಿಗಳು ಸಿದ್ಧ

### ವಾರಣಾಸಿ ಸೇರಿದಂತೆ 22 ನಗರಗಳ ಕಾಮಗಾರಿಗಳು ಮುಂದಿನ ತಿಂಗಳಲ್ಲಿ ಪೂರ್ಣ

ನವದೆಹಲಿ, ಫೆ. 12 – ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸ್ಮಾರ್ಟ್ ಸಿಟಿ ಮಿಷನ್ ಅಡಿಯಲ್ಲಿ 22 ನಗರಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳು ಮುಂದಿನ ತಿಂಗಳು ಪೂರ್ಣವಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗ್ರಾ, ವಾರಣಾಸಿ, ಚೆನ್ನೈ, ಪುಣೆ ಹಾಗೂ ಅಹಮದಾಬಾದ್ ಸೇರಿದಂತೆ 22 ನಗರಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಸ್ಮಾರ್ಟ್ ಸಿಟಿಯ ಉಳಿದ 78 ನಗರಗಳ ಕಾಮಗಾರಿಗಳು ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿವೆ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜೂನ್ 25, 2015ರಂದು ಸ್ಮಾರ್ಟ್ ಸಿಟಿ ಮಿಷನ್ ಯೋಜನೆಗೆ ಚಾಲನೆ ನೀಡಿದ್ದರು. ಈ ಯೋಜನೆಯಡಿ 100 ನಗರಗಳನ್ನು ಮರು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿತ್ತು. ಜನವರಿ 2016ರಿಂದ ಜೂನ್ 2018ರ ನಡುವೆ ನಡೆದ ನಾಲ್ಕು ಹಂತಗಳ ಸ್ಪರ್ಧೆಯಲ್ಲಿ ಈ ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು.


ನಗರಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಹಾಗೂ ಅದರ ನಾಗರಿಕರಿಗೆ ಉತ್ತಮ ಗುಣಮಟ್ಟದ ಜೀವನ ಸೌಲಭ್ಯ ಕಲ್ಪಿಸುವ, ಸ್ವಚ್ಛ ಹಾಗೂ ಸುಸ್ಥಿರ ಅಭಿವೃದ್ಧಿಯ ಜೊತೆಗೆ ಹಲವಾರು ವಿಷಯಗಳಿಗೆ ಸ್ಮಾರ್ಟ್ ಪರಿಹಾರ ಒದಗಿಸಲು ಯೋಜನೆ ರೂಪಿಸಲಾಗಿದೆ ಎಂದು ಸಚಿವಾಲಯ ತಿಳಿಸಿತ್ತು.

ಭೂಪಾಲ್, ಇಂದೋರ್, ಆಗ್ರ, ವಾರಣಾಸಿ, ಭುವನೇಶ್ವರ, ಚೆನ್ನೈ, ಕೊಯಂಬತ್ತೂರು, ಈರೋಡ್, ರಾಂಚಿ, ಸೇಲಂ, ಸೂರತ್, ಉದಯಪುರ, ವಿಶಾಖಪಟ್ಟಣಂ, ಅಹಮದಾಬಾದ್, ಕಾಕಿನಾಡ, ಪುಣೆ, ವೆಲ್ಲೂರು, ಪಿಂಪ್ರಿ - ಚಿಂಚ್ವಾಡ, ಮಥುರಾ, ಅಮರಾವತಿ, ತಿರುಚಿರಾಪಳ್ಳಿ ಹಾಗೂ ತಂಜಾವೂರುಗಳಲ್ಲಿ ಸ್ಮಾರ್ಟ್ ಸಿಟಿಯ ಎಲ್ಲ ಕಾಮಗಾರಿಗಳು ಮಾರ್ಚ್ ಒಳಗೆ ಪೂರ್ಣಗೊಳ್ಳಲಿವೆ.

22 ನಗರಗಳಲ್ಲಿನ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಮಾರ್ಚ್ ವೇಳೆಗೆ ಪೂರ್ಣಗೊಳಿಸಲಿದ್ದೇವೆ. ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಉಳಿದ ನಗರಗಳ ಯೋಜನೆಗಳನ್ನೂ ಪೂರ್ಣಗೊಳಿಸುತ್ತೇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಿಶೇಷ ಉದ್ದೇಶದ ವಾಹಕ (ಎಸ್.ಪಿ.ವಿ.) ಮೂಲಕ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ.

ಈ ಬಗ್ಗೆ ರಾಜ್ಯಸಭೆಯಲ್ಲಿ ಫೆಬ್ರವರಿ 6ರಂದು ಹೇಳಿಕೆ ನೀಡಿದ್ದ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯದ (2ನೇ ಪುಟಕ್ಕೆ)

## ನಜೀರ್ ಸೇರಿ ಆರು ರಾಜ್ಯಪಾಲರ ನೇಮಕ



**ಆಂಧ್ರ ಪ್ರದೇಶದ ರಾಜ್ಯಪಾಲರಾಗಿ ಕನ್ನಡಿಗ ಅಬ್ದುಲ್ ನಜೀರ್**

ನವದೆಹಲಿ, ಫೆ. 12 – ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಸೇರಿದಂತೆ, ಆರು ಜನರನ್ನು ರಾಜ್ಯಪಾಲರಾಗಿ ನೇಮಿಸಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೇಮಕಾತಿ ಆದೇಶ ಹೊರಡಿಸಿದ್ದಾರೆ. ಇದೇ ವೇಳೆ ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಹಾಗೂ ಲಡಾಖ್ ಲೆಫ್ಟಿನೆಂಟ್ ಗವರ್ನರ್ ಆರ್.ಕೆ. ಮಾಥುರ್ ಅವರ ರಾಜೀನಾಮೆಗಳನ್ನು ಅಂಗೀಕರಿಸಿದ್ದಾರೆ.

ಕರ್ನಾಟಕದವರಾದ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರನ್ನು ಆಂಧ್ರ ಪ್ರದೇಶದ ನೂತನ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಹಾಲಿ ಆಂಧ್ರದ ರಾಜ್ಯಪಾಲರಾಗಿರುವ ಬಿಸ್ವ ಭೂಷಣ್ ಹರಿಚಂದನ್ ಅವರನ್ನು ಛತ್ತೀಸ್‌ಘಡಕ್ಕೆ ನೇಮಿಸಲಾಗಿದೆ.

ನ್ಯಾಯಮೂರ್ತಿ ನಜೀರ್ ಅವರು ಜನವರಿ 4ರಂದು ನಿವೃತ್ತರಾಗಿದ್ದರು. ಇವರು ಅಯೋಧ್ಯೆ ರಾಮಮಂದಿರ, ತ್ರಿವಳಿ ತಲಾಕ್, ಖಾಸಗಿತನದ ಹಕ್ಕು ಸೇರಿದಂತೆ ಹಲವು ಪ್ರಮುಖ ತೀರ್ಪುಗಳನ್ನು ನೀಡಿದ ಪೀಠದ ಭಾಗವಾಗಿದ್ದರು. ಜಾರ್ಖಂಡ್ ರಾಜ್ಯಪಾಲರಾಗಿದ್ದ ರಮೇಶ್ ಬೈಸ್ ಅವರನ್ನು ಮಹಾರಾಷ್ಟ್ರದ ರಾಜ್ಯಪಾಲರಾಗಿ ವರ್ಗಾಯಿಸಲಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರ ಕುರಿತು ನೀಡಿದ ಹೇಳಿಕೆ ಸೇರಿದಂತೆ ಹಲವಾರು ವಿಷಯಗಳಿಂದಾಗಿ ರಾಜ್ಯಪಾಲ ಕೊಶ್ಯಾರಿ ವಿವಾದಕ್ಕೆ ಸಿಲುಕಿದ್ದರು. ಕಳೆದ ತಿಂಗಳು ಅವರು ರಾಜೀನಾಮೆ ನೀಡುವುದಾಗಿ ತಿಳಿಸಿದ್ದರು.

ಮಾಥುರ್ ರಾಜೀನಾಮೆಗೆ ಕಾರಣಗಳೇನು ಎಂಬುದು ಸ್ಪಷ್ಟವಾಗಿಲ್ಲ. ಅವರ ವಿರುದ್ಧ ಶಿಕ್ಷಣ ಸುಧಾರಣಾವಾದಿ ಸೋನಮ್ ವಾಂಗ್‌ಚುಕ್ ಅವರು ಅಭಿಯಾನ ನಡೆಸಿದ್ದರು.

ಮಾಥುರ್ ಅವರ ಜಾಗಕ್ಕೆ ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ನಿವೃತ್ತ ಬ್ರಿಗೇಡಿಯರ್ ಬಿ.ಡಿ. ಮಿಶ್ರ ಅವರನ್ನು ನೇಮಿಸಲಾಗಿದೆ.

ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೈವಲ್ಯ ತ್ರಿವಿಕ್ರಮ್ ಪರ್ನಾಯಕ್ ಅವರನ್ನು ನೇಮಿಸಲಾಗಿದೆ.

ಸಿಕ್ಕಿಂ ರಾಜ್ಯಪಾಲರಾಗಿ ಲಕ್ಷ್ಮಣ್ ಪ್ರಸಾದ್ ಆಚಾರ್ಯ, ಜಾರ್ಖಂಡ್ ರಾಜ್ಯಪಾಲರಾಗಿ ಸಿ.ಪಿ. ರಾಧಾಕೃಷ್ಣನ್, ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಶಿವ ಪ್ರತಾಪ್ ಶುಕ್ಲ ಹಾಗೂ ಅಸ್ಸಾಂ ರಾಜ್ಯಪಾಲರಾಗಿ ಗುಲಾಬ್ ಚಂದ್ ಕಟಾರಿಯ ಅವರನ್ನು ನೇಮಿಸಲಾಗಿದೆ.

ನೂತನವಾಗಿ ಆಂಧ್ರ ಪ್ರದೇಶದ ರಾಜ್ಯಪಾಲರಾಗಿ ನಿಯುಕ್ತಿಗೊಂಡಿರುವ ಕನ್ನಡಿಗ ಎಸ್. ಅಬ್ದುಲ್ ನಜೀರ್ ಅವರಿಗೆ ಅಭಿನಂದಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮೂಲತಃ ಮಂಗಳೂರಿನ ಬೆಳುವಾಯಿಯವರಾದ ಇವರು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿ, ನಂತರ ಸುಪ್ರೀಂ ಕೋರ್ಟ್ ನಲ್ಲಿ ನ್ಯಾಯಾಧೀಶರಾಗಿ, ನಿವೃತ್ತರಾಗಿದ್ದರು.

## ಸಣ್ಣ ಭೂ ಕಂಪನಗಳಿಂದಾಗಿ ಭಾರತಕ್ಕೆ ರಕ್ಷಣೆ

ನವದೆಹಲಿ, ಫೆ. 12 – ಭೂ ಪದರಗಳಿಂದ ಉಂಟಾಗುವ ಒತ್ತಡವನ್ನು ಸಣ್ಣ ಕಂಪನಗಳು ಬಿಡುಗಡೆ ಮಾಡುತ್ತಿವೆ. ಇದರಿಂದಾಗಿ ಭಾರತಕ್ಕೆ ರಕ್ಷಣೆ ಸಿಗುತ್ತಿದೆ ಎಂದು ಭೂವಿಜ್ಞಾನ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಪಾಕಿಸ್ತಾನದ ಗಡಿಯಲ್ಲಿ ಮೂರು ಭೂ ಪದರಗಳು ಸೇರುತ್ತವೆ. ಈ ಭಾಗದಲ್ಲಿ ಸಣ್ಣ ಹಂತದ ಕಂಪನಗಳಿಂದ ನಿರಂತರ ಒತ್ತಡ ಬಿಡುಗಡೆಯಾಗುತ್ತಿದೆ. ರಿಕ್ಟರ್ ಮಾಪಕದಲ್ಲಿ 4 ಹಾಗೂ 5ರಷ್ಟಿರುವ ಕಂಪನಗಳಿಂದ ಒತ್ತಡ ಬಿಡುಗಡೆಯಾಗುತ್ತಿದೆ ಎಂದು ಭೂ ವಿಜ್ಞಾನ ಸಚಿವಾಲಯದ ನ್ಯಾಷನಲ್ ಸೆಂಟರ್ ಫಾರ್ ಸಿಸ್ಮಾಲಜಿ ನಿರ್ದೇಶಕ ಒ.ಪಿ. ಮಿಶ್ರ ತಿಳಿಸಿದ್ದಾರೆ.

ಭೂಪದರಗಳ ಚಲನೆಯಿಂದಾಗಿ ಅಪಾರ ಪ್ರಮಾಣದ ಒತ್ತಡವಾಗುತ್ತದೆ. ಇದು ಭೂಕಂಪ ಹಾಗೂ ಜ್ವಾಲಾಮುಖಿ ಚಟುವಟಿಕೆಗಳಿಗೆ ಕಾರಣವಾಗುತ್ತದೆ. ಭೂ ಪದರಗಳ ತ್ರಿವಳಿ ಸಂಗಮ ಇರುವ ಕಡೆಗಳಲ್ಲಿನ ಒತ್ತಡ ಒಮ್ಮೆಲೆ ಬಿಡುಗಡೆಯಾದರೆ ಅಪಾರ ಹಾನಿಯಾಗುತ್ತದೆ ಎಂದು ಮಿಶ್ರ ತಿಳಿಸಿದ್ದಾರೆ.

ಟರ್ಕಿಯಲ್ಲಿ ತ್ರಿವಳಿ ಭೂಪದರಗಳು ಸೇರುವ ಜಾಗ ಎರಡು ಕಡೆ ಇದೆ. ಟರ್ಕಿಯಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದಲ್ಲಿ 25 ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. (2ನೇ ಪುಟಕ್ಕೆ)

## ಏರೋ ಇಂಡಿಯಾದಲ್ಲಿ ಹೆಚ್.ಎ.ಎಲ್. ತರಬೇತಿ



ಬೆಂಗಳೂರು, ಫೆ. 12 – ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಮೊದಲ ಬಾರಿಗೆ ಮುಂದಿನ ಪೀಳಿಗೆಯ ಸೂಪರ್‌ಸಾನಿಕ್ ತರಬೇತಿ ವಿಮಾನವಾದ ಹೆಚ್.ಎಲ್.ಎಫ್.ಟಿ. - 42 ಮಾದರಿಯನ್ನು ಏರೋ ಇಂಡಿಯಾ ಕಾರ್ಯಕ್ರಮದಲ್ಲಿ ಪ್ರದರ್ಶನ ಮಾಡಲಿದೆ. ಸೋಮವಾರದಿಂದ ಪ್ರದರ್ಶನ ಆರಂಭವಾಗಲಿದೆ. ಹೆಚ್.ಎಲ್.ಎಫ್.ಟಿ.-42 ಮಾದರಿಯು ಆಧುನಿಕ ಸಮರ ತರಬೇತಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೆಚ್.ಎ.ಎಲ್. ತಿಳಿಸಿದೆ.

ಯಲಹಂಕದಲ್ಲಿರುವ ವಾಯುಪಡೆ ಕೇಂದ್ರದಲ್ಲಿ ಐದು ದಿನಗಳ ಕಾಲ ವೈಮಾನಿಕ ಪ್ರದರ್ಶನ ನಡೆಯಲಿದೆ. ಈ ಪ್ರದರ್ಶನದಲ್ಲಿ ತನ್ನ ತರಬೇತಿ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಿಂಬಿಸಲಾಗುವುದು. ಹಲವಾರು ವೈಮಾನಿಕ ಉತ್ಪನ್ನಗಳನ್ನು ಪ್ರದರ್ಶನ ಮಾಡಲಾಗುವುದು ಎಂದು ಹೆಚ್.ಎ.ಎಲ್. ತಿಳಿಸಿದೆ.




**ವಿಜಯನಗರ ವಿಧಾನಸಭಾ ಕ್ಷೇತ್ರದ "ಚುನಾವಣಾ ಪ್ರಭಾರಿ"ಯಾಗಿ ಬಿ.ಜಿ. ಅಜಯ್‌ಕುಮಾರ್**

ವಿಜಯನಗರ (ಹೊಸಪೇಟೆ) ವಿಧಾನಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಪ್ರಭಾರಿಯನ್ನಾಗಿ ದಾವಣಗೆರೆ ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, 17ನೇ ವಾರ್ಡ್ - ಪಿ.ಜೆ. ಬಡಾವಣೆಯ ಸದಸ್ಯರೂ ಆದ ಶ್ರೀ ಬಿ.ಜಿ. ಅಜಯ್‌ಕುಮಾರ್ ಅವರನ್ನು ನೇಮಕ ಮಾಡಿ, ರಾಜ್ಯ ಬಿಜೆಪಿ ಅಧ್ಯಕ್ಷರಾದ ನಳಿನ್‌ಕುಮಾರ್ ಕಟೀಲ್ ಅವರು ಆದೇಶ ಹೊರಡಿಸಿದ್ದಾರೆ.

ಶ್ರೀಯುತ ಅಜಯ್‌ಕುಮಾರ್ ಅವರು, ಪುದುಚೇರಿ ರಾಜ್ಯದ ವಿಧಾನಸಭಾ ಕ್ಷೇತ್ರವೊಂದರ ಚುನಾವಣಾ ಉಸ್ತುವಾರಿಯಾಗಿ ಮತ್ತು ಗುಲ್ಬರ್ಗಾ ಮಹಾನಗರ ಪಾಲಿಕೆ ಚುನಾವಣೆಯಲ್ಲಿ 5 ವಾರ್ಡ್‌ಗಳ ಉಸ್ತುವಾರಿಯಾಗಿ ನೇಮಕಗೊಂಡು, ಆ ಎರಡೂ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.


## ಜಗಳೂರು ತಾ.ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಪ್ರೊ. ಎಚ್. ಲಿಂಗಪ್ಪ



ಜಗಳೂರು, ಫೆ. 12- ಇದೇ ಫೆ. 25 ರಂದು ನಡೆಯಲಿರುವ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಚ್. ಲಿಂಗಪ್ಪ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷೆ ಸುಜಾತಮ್ಮ ತಿಳಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ವರ್ಷಗಳ ಬಳಿಕ ತಾಲ್ಲೂಕಿನಲ್ಲಿ ಎರಡನೇ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಲಾಗಿದೆ ಎಂದರು.

ದಿ. 25 ರಂದು ಕನ್ನಡ ನುಡಿ ಜಾತ್ರೆಯು ಅದ್ದೂರಿಯಾಗಿ ಜರುಗಲಿದೆ. ಸಮ್ಮೇಳನದಲ್ಲಿ ಜಗಳೂರು ತಾಲ್ಲೂಕಿನ ಐತಿಹಾಸಿಕ ಪರಂಪರೆ, (3ನೇ ಪುಟಕ್ಕೆ)

## ಕೆಸಿಐಎಪಿಎಂ ರಾಜ್ಯಾಧ್ಯಕ್ಷರಾಗಿ ಡಾ. ಸುರೇಶ್ ಹನಗವಾಡಿ



ದಾವಣಗೆರೆ, ಫೆ. 12- ನಗರದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪೆಥಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಸುರೇಶ್ ಹನಗವಾಡಿ ಅವರು ರಾಷ್ಟ್ರೀಯ ರೋಗ ಲಕ್ಷಣ ಶಾಸ್ತ್ರಜ್ಞರ ಸಂಘದ ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ನಿನ್ನೆ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಡಾ. ಹನಗವಾಡಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಸುಮಾರು 30 ವರ್ಷಗಳಿಂದ ರೋಗ ಲಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ರಕ್ತ ಮತ್ತು ರಕ್ತ (2ನೇ ಪುಟಕ್ಕೆ)

## ಶರಣ ಧರ್ಮ ರಕ್ಷಣೆಯಲ್ಲಿ ಅಂಬಿಗರ ಚೌಡಯ್ಯನವರ ಪಾತ್ರ ಹಿರಿದು

ದಾವಣಗೆರೆ, ಫೆ. 12- ಕಲ್ಯಾಣ ಕ್ರಾಂತಿಯಲ್ಲಿ ಶರಣ ಧರ್ಮ ರಕ್ಷಣೆ, ವಚನ ಸಾಹಿತ್ಯದ ಉಳಿವಿನಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಅವರ ಪಾತ್ರ ಪ್ರಮುಖವಾದುದು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ, ಹಿರಿಯ ಉಪನ್ಯಾಸಕರೂ ಆದ ಶ್ರೀಮತಿ ಸುಮತಿ ಜಯಪ್ಪ ಹೇಳಿದರು.

ನಗರದ ತರಳಬಾಳು ಬಡಾ ವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ಶಿವಗೋಷ್ಠಿ ಸಮಿತಿ ಹಾಗೂ ಸಾದರ ನೌಕರರ ಬಳಗದ ವತಿಯಿಂದ ನಿನ್ನೆ ಹಮ್ಮಿ ಕೊಂಡಿದ್ದ 'ಶಿವಗೋಷ್ಠಿ-292, ಸ್ಮರಣೆ- 64' ಕಾರ್ಯಕ್ರಮದಲ್ಲಿ 'ಅಂಬಿಗರ ಚೌಡಯ್ಯನವರ ವಚನಗಳು' ಕುರಿತು ಮಾತನಾಡಿದರು.

ತುಂಗಭದ್ರಾ ನದಿಯಲ್ಲಿ ದೋಣಿ ನಡೆಸುವ ಕಾಯಕ ಮಾಡುತ್ತಾ ಕಂದಾ ಚಾರ,



ಮೂಢನಂಬಿಕೆಗಳನ್ನು ಖಂಡಿಸುತ್ತಾ, ಸಮಾಜದಲ್ಲಿನ ಅನ್ಯಾಯ, ವೈದಿಕತೆಯನ್ನು ವಿರೋಧಿಸುತ್ತಾ ಶಿವಾನುಭವ, ವಚನಗಳ ಚಿಂತನೆ, ಶರಣ ತತ್ವವನ್ನು ಪಸರಿಸುವ ಕೆಲಸವನ್ನು ಶುದ್ಧ ಮನಸ್ಸಿನಿಂದ ಮಾಡುತ್ತಿದ್ದ ನಿಜಶರಣ ಎಂದು ಬಣ್ಣಿಸಿದರು.

12 ನೇ ಶತಮಾನದಲ್ಲಿನ ಅಸಂಖ್ಯಾತ ಶರಣ ಸಂಕುಲದಲ್ಲಿ ವಿಭಿನ್ನ ವ್ಯಕ್ತಿತ್ವ ಹೊಂದಿರುವ ವೀರಗಣಾಚಾರಿ, ತತ್ವಜ್ಞಾನಿಯಾಗಿ, ವಚನಕಾರರಾಗಿ, ಕ್ರಾಂತಿಯ

**ಶಿವಗೋಷ್ಠಿ ಕಾರ್ಯಕ್ರಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ**

ಕೆಂಡದುಂಡೆಯಾಗಿ ಹೊರಹೊಮ್ಮುತ್ತಾರೆ. ಏಕದೇವ ಉಪಾಸಕರಾಗಿದ್ದರು ಎಂದರು.

ಕಲ್ಯಾಣ ಕ್ರಾಂತಿಯಲ್ಲಿ ಎಲ್ಲವೂ ನಾಶವಾಗಿ ಕೇವಲ 330 ವಚನಗಳು ನಮಗೆ ಲಭ್ಯವಿದ್ದು, ಇವರ ವಚನಗಳ ಬಗ್ಗೆ ಇನ್ನೂ ಸಂಶೋಧನೆಗಳು ಆಗಬೇಕಾಗಿವೆ ಎಂದು ಹೇಳಿದರು.

ನಿವೃತ್ತ ಮುಖ್ಯ ಶಿಕ್ಷಕ ಲಿಂ. ವೈ.ಜಿ. ರುದ್ರಪ್ಪ ಅವರ ಸ್ಮರಣೆ ಮಾಡಿದ ಚನ್ನಗಿರಿ ಕಾಲೇಜಿನ ಉಪನ್ಯಾಸಕ ಎಂ.ಆರ್. ಶಿವಕುಮಾರ್ ಅವರು, ಮಾದರಿ ವ್ಯಕ್ತಿತ್ವದ, ಸರಳ, ಸಜ್ಜನಿಕೆಯ, ಆದರ್ಶ ವ್ಯಕ್ತಿತ್ವದ ವೈ.ಜಿ. ರುದ್ರಪ್ಪ ಅವರು ಸ್ಮರಣೀಯರು ಎಂದರು.

ತರಳಬಾಳು ವಿದ್ಯಾಸಂಸ್ಥೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಅವರು ಜನಾನುರಾಗಿಯಾಗಿ, ಶಿಕ್ಷಣ ಕ್ಷೇತ್ರವಲ್ಲದೇ ಸಮಾಜ ಸೇವಾ ಕ್ಷೇತ್ರದಲ್ಲೂ ಜನಮಾನಸದಲ್ಲಿ ಉಳಿಯುವಂತಹ ಕಾರ್ಯಗಳನ್ನು ಮಾಡಿದ್ದಾರೆಂದರು.

ಶಿವಗೋಷ್ಠಿ ಸಮಿತಿ ಅಧ್ಯಕ್ಷರಾದ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸಿದ್ದರು. ವಿಮಲಮ್ಮ ದಿ. ವೈ.ಜಿ. ರುದ್ರಪ್ಪ, ಮುಖಂಡರಾದ ಕೆಂಚನಗೌಡ್ರು, ವೈ.ಜಿ. ಪ್ರಕಾಶ್, ಎಸ್.ಕೆ. ಹಲಗಣ್ಣನವರ್ ಮತ್ತಿತರರಿದ್ದರು.


**ಕೊಲ್ಲಿ ಭೋಗೇಶ್ವರರಾವ್ ನಿಧನ**



ಹರಿಹರ ತಾಲ್ಲೂಕು ನೆಹರೂ ನಗರ ವಾಸಿ
ದಾವಣಗೆರೆ ಜಿಲ್ಲಾ ಕಮ್ಮವಾರಿ ಸಂಘದ ಸಂಸ್ಥಾಪಕ ನಿರ್ದೇಶಕರಾದ
**ಶ್ರೀ ಕೊಲ್ಲಿ ಭೋಗೇಶ್ವರರಾವ್** ಅವರು
ದಿನಾಂಕ 12.2.2023ರ ಭಾನುವಾರ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13-2-2023ರ ಸೋಮವಾರ ಬೆಳಿಗ್ಗೆ 10 ಕ್ಕೆ ಮೃತರ ಸ್ವಗ್ರಾಮ ಹರಿಹರ ತಾಲ್ಲೂಕಿನ ನೆಹರೂ ನಗರದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಕುಟುಂಬಸ್ಥರು ಹಾಗೂ ಬಂಧು-ಮಿತ್ರರು

# ಜಾನಪದ ಕಲೆ ಉಳಿಸಿ, ಬೆಳೆಸಬೇಕು

## ರಾಜ್ಯಮಟ್ಟದ ಭಜನಾ ಸ್ಪರ್ಧೆ ಉದ್ಘಾಟಿಸಿದ ಶಾಸಕ ಅರುಣ್‌ಕುಮಾರ್



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ.12- ಆಧುನಿಕ ಯುಗದ ಭರಾಟೆಯಲ್ಲಿ ಜಾನಪದ ಕಲೆಗಳು ನಶಿಸಿ ಹೋಗುತ್ತಿದ್ದು, ಇಂದಿನ ಯುವ ಪೀಳಿಗೆ ಜಾನಪದ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯನ್ನು ಉಳಿಸಿ, ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಶಾಸಕ ಅರುಣಕುಮಾರ ಪೂಜಾರ್ ಹೇಳಿದರು.

ನಗರದ ಯರೇಕುಪ್ಪಿ ರಸ್ತೆಯ ಶ್ರೀ ನೀಲಕಂಠೇಶ್ವರ ದೇವಸ್ಥಾನ ಆವರಣದ ಶ್ರೀ ಗಣೇಶೋತ್ಸವ ಮಂಟಪದಲ್ಲಿ ಶನಿವಾರ ಸ್ಥಳೀಯ ಕಾಕಿ ಜನಸೇವಾ ಸಂಸ್ಥೆ, ಕುರುಹಿನ ಶೆಟ್ಟಿ ಸಮಾಜ ಸೇವಾ ಸಂಘ, ಜೆಸಿಐ ಘಟಕ ಹಾಗೂ ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮತ್ತು ಸೌರಭ ಜಾನಪದ ಕಲಾ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ದಿ.ದೊಡ್ಡನಾಗಪ್ಪ ಕಾಕಿ ಹಾಗೂ ದಿ. ಸಣ್ಣನಾಗಪ್ಪ ಕಾಕಿ ಇವರ ಸ್ಮರಣಾರ್ಥ ಏರ್ಪಡಿಸಲಾಗಿದ್ದ ರಾಜ್ಯಮಟ್ಟದ ಭಜನಾ ಸ್ಪರ್ಧೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ವಜ್ಞ, ಶಿಶುನಾಳ ಷರಿಫರು ಕನಕದಾಸ, ಗದುಗಿನ ಕುಮಾರವ್ಯಾಸರ ಸೇರಿದಂತೆ ಅನೇಕ ಮಹನೀಯರು ರಚಿಸಿದ ಜನಪದ ಸಾಹಿತ್ಯ ಹಾಗೂ ಕಾವ್ಯಗಳಲ್ಲಿ ಅಭೂತಪೂರ್ವ ತತ್ವ ಶಕ್ತಿಗಳು ಅಡಗಿವೆ. ಇಂತಹ ನಾಡಿನ ನೆಲ, ಜಲ, ಧರ್ಮ, ಸಂಸ್ಕೃತಿ, ಪರಂಪರೆ ಹಾಗೂ ಗ್ರಾಮೀಣ ಸೊಗಡು ಬಿಂಬಿಸುವ ಜಾನಪದ ಕಲೆ ಮತ್ತು ಸಾಹಿತ್ಯಗಳು ಕುರಿತು ತಿಳಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಸಮಾಜದ ಅಭಿವೃದ್ಧಿಗೆ ಸದಾ ಕೆಲಸ ಮಾಡುತ್ತಿರುವುದು ಕಾಕಿ ಮನೆತನ. ಬಡವರಿಗೆ ನಿವೇಶನ ಸೇರಿದಂತೆ ಅನೇಕ ಯೋಜನೆ ಹಮ್ಮಿಕೊಂಡಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಕಿ ಜನಸೇವಾ ಸಂಸ್ಥೆ ಅಧ್ಯಕ್ಷ ಶ್ರೀನಿವಾಸ ಕಾಕಿ ಮಾತನಾಡಿ, ಹಿಂದಿನ ಕಾಲದಲ್ಲಿ ಜನಪದಕ್ಕೆ ಹೆಚ್ಚಿನ ಮಹತ್ವವಿತ್ತು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಯುವ ಜನಾಂಗ ಹಾಳಾಗುತ್ತಿದೆ. ಇಂತಹ ಕಾರ್ಯಕ್ರಮ ಗಳ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದ್ದೇವೆ. ನಾಡಿನ ಜಾನಪದ ಕಲೆ, ಸಂಸ್ಕೃತಿ ಉಳಿಸಿಕೊಂಡಾಗ ಮಾತ್ರ ಸ್ವಾಸ್ಥ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಕಾಕಿ ಜನ ಸೇವಾ ಸಂಸ್ಥೆ ವತಿಯಿಂದ ಅಂಧ ಮಕ್ಕಳಿಗೆ ಬಟ್ಟೆ ಕಿಟ್ ವಿತರಣೆ, ಕ್ಷಯ ರೋಗಿಗಳ ಆಹಾರ ಕಿಟ್ ಹಾಗೂ ದತ್ತು ಕಾರ್ಯಕ್ರಮ, ಕುರುಹಿನಶೆಟ್ಟಿ ಕೇಂದ್ರ ಸಂಘಕ್ಕೆ ಆಯ್ಕೆಯಾದ ಶಿವಾನಂದ ಸಾಲಗೇರಿ ಹಾಗೂ ಸಾಧನೆಗೈದ ಯುವಕರನ್ನು ಸನ್ಮಾನಿಸಲಾಯಿತು.

ನಗರಸಭೆ ಸದಸ್ಯರಾದ ಮಲ್ಲಿಕಾರ್ಜುನ ಅಂಗಡಿ, ರಾಘವೇಂದ್ರ ಕುಲಕರ್ಣಿ, ಶಿವಕುಮಾರ ನರಸಗೊಂಡರ, ಮಂಜುನಾಥ ಕಾಟಿ, ಪವನಕುಮಾರ ಮಲ್ಲಾಡದ, ಕುರುಹಿನಶೆಟ್ಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಹನುಮಂತಪ್ಪ ಅಮಾಸಿ, ಉಪಾಧ್ಯಕ್ಷ ಶಿವಾನಂದ ಸಾಲಗೇರಿ, ಕಾರ್ಯದರ್ಶಿ ಮಂಜುನಾಥ ಹೊಸಪೇಟೆ, ಖಜಾಂಚಿ ಹನುಮಂತಪ್ಪ ಕಾಕಿ, ಸಣ್ಣ ಹನುಮಂತಪ್ಪ ಕಾಕಿ, ಭೀಮಣ್ಣ ಕಾಕಿ, ರೂಪಾ ಕಾಕಿ, ಶೋಭಾ ಹೊಸಪೇಟೆ, ಕುಮಾರ ಶ್ಯಾವಿ, ರೇಣುಕಾ ಅಮಾಸಿ, ಚನ್ನಪ್ಪ ಮಾನಕನಹಳ್ಳಿ, ಭೋಜಪ್ಪ ಕನಕೇರಿ, ಸಿದ್ದಪ್ಪ ಬೂದನೂರು, ಗುಡದಯ್ಯ ಹಲಗೇರಿ, ಶಿವಾನಂದ ಬಗಾದಿ, ವಿ.ಸಿ.ಹಿರೇಮಠ, ಪ್ರಭು ಎಳೆಹೊಳೆ, ನಾಗರಾಜ ಹೊಸಪೇಟೆ ಸೇರಿದಂತೆ ಮತ್ತಿತರರು ಇದ್ದರು.

# ಲೋಕ ಅದಾಲತ್‌ನಲ್ಲಿ 813 ಪ್ರಕರಣಗಳು ಇತ್ಯರ್ಥ



**ಹರಪನಹಳ್ಳಿ**

ಹರಪನಹಳ್ಳಿ, ಫೆ.12- ತಾಲ್ಲೂಕು ಸೇವೆಗಳ ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ನಡೆದ ಒಟ್ಟು 943 ಪ್ರಕರಣಗಳನ್ನು ಕೈಗೆತ್ತಿಕೊಂಡು, 813 ಪ್ರಕರಣಗಳನ್ನು ಉಭಯ ನ್ಯಾಯಾಲಯದ ನ್ಯಾಯಾಧೀಶರುಗಳಾದ ಎಂ. ಭಾರತಿ, ಮತ್ತು ಫಕ್ಕೀರವ್ವ ಕೆಳಗೇರಿ ನ್ಯಾಯಾಧೀಶರುಗಳ ನೇತೃತ್ವದಲ್ಲಿ ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿದರು.

ಪಟ್ಟಣದ ಉಭಯ ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಸ್ತೆ ಅಪಘಾತ,ಚೆಕ್ ಬೌನ್ಸ್ , ಬ್ಯಾಂಕ್ ಸಾಲ ವಸೂಲಿ, ಜಮೀನು ಒತ್ತುವರಿ, ಕೌಟುಂಬಿಕ ದೌರ್ಜನ್ಯ, ಕ್ರಿಮಿನಲ್ ಪ್ರಕರಣ, ಮೋಟಾರು ವಾಹನ, ಸಹಕಾರಿ ಬ್ಯಾಂಕುಗಳು, ನಿವೇಶನ ಮಾರಾಟ ಒಳಗೊಂಡಂತೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒಟ್ಟು 435 ಪ್ರಕರಣಗಳ ಪೈಕಿ 338 ಪ್ರಕರಣಗಳನ್ನು ಇತ್ಯರ್ಥಪಡಿಸಿ, ಒಟ್ಟು 1.26 ಕೋಟಿ. ರೂ.ಗಳು ಮತ್ತು ಬ್ಯಾಂಕ್ ದಾವಾ ಪೂರ್ವ ಪ್ರಕರಣಗಳನ್ನು ಹಣದ ರೂಪದಲ್ಲಿ ಇತ್ಯರ್ಥ ಪಡಿಸಿದರು.

ಕಿರಿಯ ಸಿವಿಲ್ ನ್ಯಾಯಾಲಯಗಳಲ್ಲಿ ಒಟ್ಟು 508 ಪ್ರಕರಣಗಳ ಪೈಕಿ 475 ಪ್ರಕರಣಗಳನ್ನು ಇತ್ಯರ್ಥ ಪಡಿಸಿ, ಒಟ್ಟು 52,82,461-00 ರೂ.ಗಳನ್ನು ಹಣದ ರೂಪದಲ್ಲಿ ಇತ್ಯರ್ಥ ಪಡಿಸಿದರು.

**ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸುಮಾರು ವರ್ಷಗಳಿಂದ ಬಿರುಕು ಗೊಂಡಿದ್ದ ದಾಂಪತ್ಯ ಜೀವನದ ಇಬ್ಬರನ್ನು ಪರಸ್ಪರ ಹೊಂದಾಣಿಕೆ ಮಾಡಿಸಿ ಇಬ್ಬರ ಮನಸ್ಸನ್ನು ಬದಲಾಯಿಸಿ ನೂತನ ಜೀವನಕ್ಕೆ ನ್ಯಾಯಾಧೀಶರು ಮನವೊಲಿಸಿ ಸತಿ-ಪತಿಗಳನ್ನು ಒಗ್ಗೂಡಿಸಿ ಯಶಸ್ವಿಗೊಳಿಸಿದರು.**

ಉಭಯ ನ್ಯಾಯಾಲಗಳಲ್ಲಿ ಒಟ್ಟು 813 ಪ್ರಕರಣಗಳು, ಮತ್ತು 1,078,84,911-00 ರೂ. ಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿದರು.

ತಾಲ್ಲೂಕಿನ ಜೆ.ಎಂ.ಎಫ್.ಸಿ ನ್ಯಾಯಾಲಯದ ಉಭಯ ನ್ಯಾಯಾಧೀಶರುಗಳು ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಲು ಸಹಕರಿಸಿದ ವಕೀಲರ ಸಂಘದ ಅಧ್ಯಕ್ಷರಿಗೆ, ಕಾರ್ಯದರ್ಶಿಗಳಿಗೆ, ಪದಾಧಿಕಾರಿಗಳಿಗೆ, ಹಿರಿಯ ನ್ಯಾಯಾವಾದಿಗಳಿಗೆ ಹಾಗೂ ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿ ಕೊಂಡ ಎಲ್ಲಾ ಕಕ್ಷಿದಾರರಿಗೆ ಉಭಯ ನ್ಯಾಯಾಲಯದ ನ್ಯಾಯಾಧೀಶರುಗಳಾದ ಎಂ. ಭಾರತಿ, ಮತ್ತು ಫಕ್ಕೀರವ್ವ ಕೆಳಗೇರಿ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ, ಎಂ. ಅಜ್ಜಣ್ಣ, ಉಪಾಧ್ಯಕ್ಷ ಕೆ. ವಿರೂಪಾಕ್ಷಪ್ಪ, ಕಾರ್ಯದರ್ಶಿ ಕೆ. ಆನಂದ, ಜಂಟಿ ಕಾರ್ಯದರ್ಶಿ ಹೂಲೆಪ್ಪ, ಖಜಾಂಚಿ ರೇಣುಕ ಮೇಟಿ, ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ನಿರ್ಮಲ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ. ಜಗದಪ್ಪ, ಹಿರಿಯ ವಕೀಲರಾದ ಟಿ. ವೆಂಕಟೇಶ್, ಬಿ. ಹಾಲೇಶ್, ಎಸ್. ರುದ್ರಮನಿ, ಕೆ. ಪ್ರಕಾಶ್ , ಬಿ. ಗೋಣಿ ಬಸಪ್ಪ, ಕೆ.ಎಸ್.ಮಂಜ್ಯಾನಾಯ್ಕ, ಮುತ್ತಿಗಿ. ರೇವಣಸಿದ್ದಪ್ಪ, ಎಂ.ಮೃತ್ಯುಂ ಜಯ, ಇದ್ಲಿ ರಾಮಪ್ಪ, ದೇವರಾಜ್, ನಂದೀಶ್, ಎಸ್. ತಿಪ್ಪೇಸ್ವಾಮಿ, ಎಸ್. ಜಾಕೀರ್, ಬಿ. ಬಸವರಾಜ್, ಜಿ. ಹಾಲೇಶ್, ಓ.ತಿರುಪತಿ, ಕೆ.ಕೊಟ್ರೇಶ್,ಎ.ಕೆ. ರಾಜಪ್ಪ, ಸಿ. ರಾಜಪ್ಪ, ಕೆ.ನಾಗರಾಜ್, ಸಿ. ಜಾತಪ್ಪ , ಜೆ. ಸೀಮಾ, ದ್ರಾಕ್ಷಾಯಣಮ್ಮ, ಬಿ.ಸಿದ್ದೇಶ್, ಸೇರಿದಂತೆ, ನ್ಯಾಯಾಲಯದ ಸಿಬ್ಬಂದಿಗಳು ಮತ್ತು ಇತರರು ಇದ್ದರು.

# ಕರ್ನಾಟಕ ಸೇರಿ ಆರು ರಾಜ್ಯಗಳ ಬಾಲಕಿಯರಿಗೆ ಕ್ಯಾನ್ಸರ್ ತಡೆ ಲಸಿಕೆ

ನವದೆಹಲಿ, ಫೆ. 12 – ಕರ್ನಾಟಕ ಸೇರಿದಂತೆ ಆರು ರಾಜ್ಯಗಳಲ್ಲಿ ಒಂಭತ್ತರಿಂದ 14 ವರ್ಷದ ಬಾಲಕಿಯರಿಗೆ ಜೂನ್ ತಿಂಗಳಿನಿಂದ ಗರ್ಭಕಂಠ ಕ್ಯಾನ್ಸರ್ ತಡೆ ಲಸಿಕೆ ನೀಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ. ಮೊದಲ ಹಂತದಲ್ಲಿ ಕರ್ನಾಟಕ, ತಮಿಳುನಾಡು, ಮಿಜೋರಾಂ, ಛತ್ತೀಸ್‌ಘಡ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶಗಳ 2.25 ಕೋಟಿ ಬಾಲಕಿಯರಿಗೆ ಲಸಿಕೆ ನೀಡಲಾಗುವುದು.

ಗರ್ಭಕಂಠ ಕ್ಯಾನ್ಸರ್ ತಡೆಯುವ ಹೆಚ್.ಪಿ.ವಿ. ಲಸಿಕೆಯನ್ನು ಸಾರ್ವತ್ರಿಕವಾಗಿ ನೀಡಲು ಕೇಂದ್ರ ಆರೋಗ್ಯ ಸಚಿವಾಲಯ ಯೋಜಿಸಿದೆ. 2026ರ ವೇಳೆಗೆ 16.02 ಕೋಟಿ ಲಸಿಕೆ ಪಡೆಯಲು ಜಾಗತಿಕ ಟೆಂಡರ್ ಕರೆಯಲಾಗಿದೆ. ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಈ ಲಸಿಕೆಯ ಉತ್ಪಾದನೆಯನ್ನು ಈಗಾಗಲೇ ಆರಂಭಿಸಿದೆ.

ಪ್ರಸಕ್ತ ಅಮೆರಿಕದ ಮರ್ಕ್ಸ್ ಗಾರ್ಡಸಿಲ್ ಲಸಿಕೆ ಮಾತ್ರ ಖಾಸಗಿಯಾಗಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇದರ ಪ್ರತಿ ಡೋಸ್ ವೆಚ್ಚ 10,850 ರೂ. ಆಗಿದೆ.

ಭಾರತದ ಸೀರಂ ಇನ್‌ಸ್ಟಿಟ್ಯೂಟ್ ಕಳೆದ ವಾರವಷ್ಟೇ ಗರ್ಭಕಂಠ ಕ್ಯಾನ್ಸರ್ ತಡೆಯ ಸೆರ್ವವಾಕ್ ಲಸಿಕೆ ಬಿಡುಗಡೆ ಮಾಡಿದೆ. ಮಾರುಕಟ್ಟೆಯಲ್ಲಿ ಪ್ರತಿ ಡೋಸ್‌ನ ವೆಚ್ಚ 2 ಸಾವಿರ ರೂ. ಆಗಿರಲಿದೆ ಎಂದು ಕಂಪನಿ ಹೇಳಿದೆ. ಮಹಿಳೆಯರಲ್ಲಿ ಈ ಕ್ಯಾನ್ಸರ್ ಬರುವ ಸಾಧ್ಯತೆ ಶೇ.1.6ರಷ್ಟಿದೆ. ಶೇ.1ರಷ್ಟು ಮಹಿಳೆ ಯರಿಗೆ ಕ್ಯಾನ್ಸರ್‌ನಿಂದ ಜೀವದ ಅಪಾಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



# ದೇವರಬೆಳಕೆರೆ : ಗಮನ ಸೆಳೆದ ಪವಾಡಗಳು

ಮಲೇಬೆನ್ನೂರು, ಫೆ.12- ದೇವರಬೆಳಕೆರೆ ಗ್ರಾಮದ ಆರಾಧ್ಯದೈವ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಭಾನುವಾರ ಸಾಯಂಕಾಲ ನಡೆದ ಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ಎಲ್ಲರ ಗಮನ ಸೆಳೆದವು. ಎದೆ ಜಲ್ ಎನ್ನುವ ಈ ಪವಾಡಗಳನ್ನು ನೋಡಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಗೊರವಪ್ಪ ಅವರುಗಳ ತ್ರಿಶೂಲವನ್ನು ಕಾಲಿಗೆ, ಕೈಗೆ ಹಾಯಿಸುವ ದೃಶ್ಯ ಮೈಜುಮ್ ಎನ್ನಿಸಿತು. ಸಂಜೆ ಓಕಳಿಯೊಂದಿಗೆ ರಥೋತ್ಸವಕ್ಕೆ ತೆರೆ ಎಳೆಯಲಾಯಿತು.

# ಮಾರ್ಚ್ 4 ರಂದು ದಾವಣಗೆರೆಗೆ ಕೇಜ್ರಿವಾಲ್



**ಆಮ್ ಆದ್ಮಿ ಪಾರ್ಟಿ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ**

ಹರಿಹರ, ಫೆ.12- ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ನಾಯಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ್ ಕ್ರೇಜಿವಾಲ್ ಅವರು ಬರುವ ಮಾರ್ಚ್ 4 ರಂದು ದಾವಣಗೆರೆ ನಗರದಲ್ಲಿ ಪಕ್ಷದ ಕಾರ್ಯಕರ್ತರ ಬೃಹತ್ ಸಭೆಯನ್ನು ನಡೆಸಲಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದರು.

ನಗರದ ಜಯಶ್ರೀ ಟಾಕೀಸ್ ಪಕ್ಕದ ಆಮ್ ಆದ್ಮಿ ಪಕ್ಷದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಚುನಾವಣಾ ಪೂರ್ವ ತಯಾರಿ ನಿಟ್ಟಿನಲ್ಲಿ ಮೊದಲ ಮಾ.4 ರಂದು ಸಭೆಯನ್ನು ದಾವಣಗೆರೆ ನಗರದಲ್ಲಿ ಆಯೋಜನೆ ಮಾಡಲಾಗುತ್ತದೆ. ಮಾ.5 ರಂದು ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ ಎಂದರು.

ಆಮ್ ಆದ್ಮಿ ಪಕ್ಷ ದೆಹಲಿ ನಗರದಲ್ಲಿ ಉತ್ತಮ ಕೊಡುಗೆಯನ್ನು ನೀಡಿದ ಪರಿಣಾಮ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿತು. ಶೇ.1 ರಷ್ಟು ಕಮಿಷನ್ ಪಡೆದ ಮಂತ್ರಿಯನ್ನು ಜೈಲಿಗೆ ಕಳಿಸಿದರು. ಆದರೆ, ರಾಜ್ಯದಲ್ಲಿ ಬಿಜೆಪಿ ಪಕ್ಷದವರು ಶೇ.40 ರಷ್ಟು ಕಮೀಷನ್ ಪಡೆದುಕೊಂಡರೂ ಅವರನ್ನು ಅಧಿಕಾರದಲ್ಲಿ ಆಡಳಿತವನ್ನು ಮಾಡುವುದಕ್ಕೆ ಬಿಟ್ಟಿದ್ದಾರೆ ಎಂದರು. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮಹಿಳೆಯರು ಪ್ರತಿ ತಿಂಗಳಲ್ಲಿ 8 ರಿಂದ 10 ಸಾವಿರ ದುಡಿಯುವ ಯೋಜನೆಯನ್ನು ರೂಪಿಸಲಾಗುತ್ತದೆ. ಯಾವುದೇ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಲಂಚದ ಹಣವನ್ನು ಪಡೆಯದ ರೀತಿಯಲ್ಲಿ ವ್ಯವಸ್ಥೆ ತರಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಜಂಟಿ ಕಾರ್ಯದರ್ಶಿ ಕೆ.ಎಲ್.ರಾಘವೇಂದ್ರ, ರಾಜ್ಯ ಮುಖಂಡ ಗುರುಮೂರ್ತಿ, ವಿಶ್ವನಾಥ್, ಜಿಲ್ಲಾ ಆಮ್ ಆದ್ಮಿ ಪಕ್ಷದ ಜಿಲ್ಲಾ ಅಧ್ಯಕ್ಷ ಚಂದ್ರಪ್ಪ, ಹರಿಹರ ಆಮ್ ಆದ್ಮಿ ಪಕ್ಷದ ಮುಖಂಡರಾದ ವೈ.ಎನ್. ಮಲ್ಲಿನಾಥ್, ಗಣೇಶ ದುರ್ಗದ್, ಬಸವರಾಜ್ ಹಲಸಬಾಳು, ಪ್ರಶಾಂತ್ ಮತ್ತಿತರರು ಹಾಜರಿದ್ದರು.

## ಆನಗೋಡಿನಲ್ಲಿ ಇಂದು ಆಶೀರ್ವಚನ

ದಾವಣಗೆರೆ ತಾಲ್ಲೂಕಿನ ಆನಗೋಡು ಶ್ರೀ ಮರುಳಸಿದ್ದೇಶ್ವರ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಸಂತ ಶ್ರೀ ಸೇವಾಲಾಲ್‌ರ 284 ನೇ ಜಯಂತಿ ಪ್ರಯುಕ್ತ ಬಿ.ಜಿ. ಚಂದ್ರಶೇಖರ್ ವಕೀಲರು ಮತ್ತು ಸ್ನೇಹಿತರ ಬಳಗದ ವತಿಯಿಂದ ಶ್ರೀ ಸಂತ ಬಾಬು ಸಿಂಗ್ ಮಹಾರಾಜ್ ಪೌರಾದೇವಿ (ಪೌರಾ ಗಡ್) ಮಹಾರಾಷ್ಟ್ರ ಇವರಿಂದ ಆಶೀರ್ವಚನ ನಡೆಯಲಿದೆ.

ಶ್ರೀ ಸಂತ ಬಾಬುಸಿಂಗ್ ಮಹಾರಾಜ್ ಪೌರಾದೇವಿ ಮಹಾರಾಷ್ಟ್ರ ಸಾನ್ನಿಧ್ಯ ವಹಿಸುವರು. ಮಾಜಿ ಸಚಿವರಾದ ಸಂತೋಷ್ ಲಾಡ್, ರುದ್ರಪ್ಪ ಲಮಾಣಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಅಬ್ದುಲ್ ಜಬ್ಬಾರ್ ಸಾಬ್, ಎಸ್.ಎಸ್. ಗಣೇಶ್, ಹೆಚ್.ಎಸ್. ನಾಗರಾಜ್, ಎಂ.ಟಿ. ಸುಭಾಷ್ಚಂದ್ರ, ಟಿ. ನಾಗರಾಜ್, ಬಿ. ವೀರಣ್ಣ, ಬಿ.ಜಿ. ನಾಗರಾಜ್, ಬಿ.ಟಿ. ಹನುಮಂತಪ್ಪ, ಎನ್.ಎಂ. ಆಂಜನೇಯ ಗೂರೂಜಿ, ಮೋಹನ್ ಕುಮಾರ್, ಅನಿಲ್ ಕುಮಾರ್ ಭಾಗವಹಿಸಲಿದ್ದಾರೆ.

## ರಾಜ್ಯಾಧ್ಯಕ್ಷರಾಗಿ ಡಾ. ಹನಗವಾಡಿ

(1ನೇ ಪುಟದಿಂದ) ರೋಗಗಳ ಕ್ಷೇತ್ರದಲ್ಲಿ ಡಾ. ಸುರೇಶ್ ಹನಗವಾಡಿ ಅವರು ಸಾಕಷ್ಟು ಶ್ರಮಿಸುತ್ತಿದ್ದಾರೆ.

ವೈದ್ಯಕೀಯ ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಬೋಧನೆ ಹಾಗೂ ಹಲವಾರು ಸಂಶೋಧನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ದಾವಣಗೆರೆಯಲ್ಲಿ ಹಿಮೊಫಿಲಿಯಾ ಸೊಸೈಟಿಯನ್ನು ಸ್ಥಾಪಿಸಿ, ರಕ್ತಸ್ರಾವ ರೋಗಿಗಳಿಗೆ ವಿಶಿಷ್ಟ ಸೇವೆಯನ್ನು ನೀಡುತ್ತಾ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

## ಏರೋ ಇಂಡಿಯಾಗಾಗಿ ಬೆಂಗಳೂರಿಗೆ ಬಂದಿಳಿದ ಪ್ರಧಾನಿ



ಬೆಂಗಳೂರು, ಫೆ. 12 – ನಾಳೆ ಸೋಮವಾರದಿಂದ ಆರಂಭವಾಗಲಿರುವ ಏರೋ ಇಂಡಿಯಾ 2023 ಪ್ರದರ್ಶನವನ್ನು ಉದ್ಘಾಟಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಬಂದಿಳಿದಿದ್ದಾರೆ. ಹೆಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ ವಿಶೇಷ ವಿಮಾನದಲ್ಲಿ ಬಂದ ಪ್ರಧಾನಿಯನ್ನು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ವಾಗತಿಸಿದರು. ಈ ವರ್ಷದ ಏರೋ ಇಂಡಿಯಾ ಪ್ರದರ್ಶನದಲ್ಲಿ ಭಾರತದಲ್ಲಿ ರೂಪಿಸಲಾದ ತಂತ್ರಜ್ಞಾನ ಹಾಗೂ ಉಪಕರಣಗಳನ್ನು ವಿಶೇಷವಾಗಿ ಪ್ರದರ್ಶಿಸಲಾಗುವುದು. ಈ ಕಾರ್ಯಕ್ರಮದಲ್ಲಿ 98 ದೇಶಗಳು ಭಾಗವಹಿಸಲಿವೆ. 809 ರಕ್ಷಣಾ ಉತ್ಪಾದನಾ ಕಂಪನಿಗಳು ತಮ್ಮ ತಂತ್ರಜ್ಞಾನದ ಪ್ರದರ್ಶನ ಮಾಡಲಿವೆ.

## ಸ್ಮಾರ್ಟ್ ಸಿಟಿಗಳು ಸಿದ್ಧ

(1ನೇ ಪುಟದಿಂದ) ಅಧೀನ ಸಚಿವ ಕೌಶಲ್ ಕಿಶೋರ್, ಸ್ಮಾರ್ಟ್ ಸಿಟಿ ಯೋಜನೆಯಡಿ 7,804 ಕಾಮಗಾರಿಗಳಿಗೆ ಅನುಮತಿ ನೀಡಲಾಗಿದೆ. ಇವುಗಳ ಮೌಲ್ಯ 1.81 ಲಕ್ಷ ಕೋಟಿ ರೂ. ಎಂದು ತಿಳಿಸಿದ್ದರು. ಈ ಯೋಜನೆಗಳ ಪೈಕಿ 5,246 ಪೂರ್ಣಗೊಂಡಿದ್ದು, ಇವುಗಳ ಮೌಲ್ಯ 98,796 ಕೋಟಿ ರೂ. ಎಂದು ಸಚಿವರು ತಿಳಿಸಿದ್ದರು. ಕೇಂದ್ರ ಸರ್ಕಾರ ಈ ಯೋಜನೆಗಳಿಗಾಗಿ 36,447 ಕೋಟಿ ರೂ. ಬಿಡುಗಡೆ ಮಾಡಿದ್ದು, ಇದರಲ್ಲಿ 32,095 ಕೋಟಿ ರೂ.ಗಳನ್ನು ಬಳಕೆ ಮಾಡಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯ ಮಾರ್ಗಸೂಚಿಗಳ ಅನ್ವಯ, ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ 48 ಸಾವಿರ ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದೆ. ಇಷ್ಟೇ ಮೊತ್ತದ ಹಣವನ್ನು ರಾಜ್ಯ ಸರ್ಕಾರ ಇಲ್ಲವೇ ನಗರ ಸ್ಥಳೀಯ ಸಂಸ್ಥೆಗಳು ಬಿಡುಗಡೆ ಮಾಡಬೇಕಿದೆ. ಪ್ರಸಕ್ತ ಸ್ಮಾರ್ಟ್ ಸಿಟಿ ಮಿಷನ್‌ಗೆ ಇನ್ನಷ್ಟು ನಗರಗಳನ್ನು ಸೇರ್ಪಡೆ ಮಾಡುವ ಯಾವುದೇ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಹೊಂದಿಲ್ಲ.

## ಸಣ್ಣ ಕಂಪನಗಳಿಂದಾಗಿ ರಕ್ಷಣೆ

(1ನೇ ಪುಟದಿಂದ) ಈ ವಲಯದಲ್ಲಿ ಸಣ್ಣ ಭೂಕಂಪಗಳು ಸಂಭವಿಸಿರಲಿಲ್ಲ. ಇದರಿಂದಾಗಿ ಭೂಗರ್ಭದಲ್ಲಿ ಸಾಕಷ್ಟು ಒತ್ತಡ ಜಮಾವಣೆಯಾಗಿತ್ತು. 24 ಗಂಟೆಗಳ ಒಳಗೆ ಭಾರೀ ಭೂಕಂಪ ಸಂಭವಿಸಿ ಒತ್ತಡ ಹೊರ ಬಿದ್ದಿದೆ ಎಂದು ಶರ್ಮ ತಿಳಿಸಿದ್ದಾರೆ.

ಅಲ್ಲದೇ, ಜನರು ಮನೆಗಳನ್ನು ಕಟ್ಟಿಕೊಳ್ಳುವಾಗ ನಿಯಮ ಪಾಲಿಸಬೇಕು. ಆಗ ಭೂಕಂಪ ಸಂಭವಿಸಿದರೂ ಸಾವು ನೋವಿನ ಪ್ರಮಾಣ ಹೆಚ್ಚಾಗುವುದಿಲ್ಲ ಎಂದವರು ಹೇಳಿದ್ದಾರೆ. ಭಾರತದ ಶೇ.59ರಷ್ಟು ಭಾಗ ಭೂಕಂಪ ಪೀಡಿತವಾಗಿದೆ.

ಐದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ 30 ನಗರಗಳು ಭೂಕಂಪದ ಸಂಭವನೀಯತೆ ಹೆಚ್ಚಾಗಿರುವ ಪ್ರದೇಶಗಳಲ್ಲಿವೆ.

ಹೊಸ ಕಟ್ಟಡಗಳ ನಿರ್ಮಾಣದ ವೇಳೆ ಭೂಕಂಪ ತಡೆ ನಿಯಮಗಳನ್ನು ಪಾಲಿಸಲಾಗುತ್ತದೆ. ಆದರೆ, ಹಾಲಿ ಇರುವ ಶೇ.90ಕ್ಕೂ ಹೆಚ್ಚು ಕಟ್ಟಡಗಳು ಹಳೆಯ ತಂತ್ರಜ್ಞಾನದಲ್ಲಿವೆ ಎಂದು ವಿಕೋಪ ನಿರ್ವಹಣೆ ವಲಯದ ಪರಿಣಿತ ಮೇಜರ್ ಜನರಲ್ ಮನೋಜ್ ಕುಮಾರ್ ಬಿಂದಾಲ್ ತಿಳಿಸಿದ್ದಾರೆ.

## ಸೂರಗೊಂಡನಕೊಪ್ಪ ಪಾದಯಾತ್ರಿಗಳಿಗೆ ಹಣ್ಣು, ಮಜ್ಜಿಗೆ, ನೀರು ಸೇವನೆಗೆ ಸಲಹೆ



ಹೊನ್ನಾಳಿ, ಫೆ. 12- ನೂರಾರು ಕಿಲೋ ಮೀಟರ್ ನಡಿಗೆ ಮೂಲಕ ಸೂರಗೊಂಡನಕೊಪ್ಪದ ಸಂತ ಸೇವಾಲಾಲ್ ಜಯಂತ್ಯುತ್ಸವಕ್ಕೆ ಬರುವ ಪಾದಯಾತ್ರಿ ಮಾಲಾಧಾರಿಗಳು ಅಧಿಕ ಬಿಸಿಲು ಇರುವುದರಿಂದ ಅಲ್ಲಲ್ಲಿ ವಿಶ್ರಾಂತಿ ಪಡೆದು ತೆರಳುವಂತೆ ಹೆಲ್ಪಿಂಗ್ ಹ್ಯಾಂಡ್ ಸೇವಾ ಫೌಂಡೇಶನ್ ಅಧ್ಯಕ್ಷ ಕೋರಿ ಯೋಗೀಶ್ ಕುಳಗಟ್ಟೆ ಸಲಹೆ ನೀಡಿದರು.

ತಾಲ್ಲೂಕಿನ ಬಂಜಾರ ಸಮುದಾಯದ ಸಂತ ಸೇವಾಲಾಲ್ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ರಾಣೇಬೆನ್ನೂರು ಮೂಲದ ಪಾದಯಾತ್ರಿ ಮಾಲಾಧಾರಿಗಳಿಗೆ ಪಟ್ಟಣದ ಹೊರವಲಯದ ತರಳಬಾಳು ಶಾಲೆಯ ಬಳಿ ಆರ್ಥಿಕ ಸಹಾಯ ಧನ ನೀಡಿ ಹಣ್ಣು, ಮಜ್ಜಿಗೆ, ನೀರಿನ ಅಂಶವುಳ್ಳ ಹೆಚ್ಚು ಹಣ್ಣುಗಳನ್ನು ಸೇವಿಸುವಂತೆ ಪಾದಯಾತ್ರಿಗಳಿಗೆ ಸಲಹೆ ನೀಡಿದರು.

## ಹರಿಹರದಲ್ಲಿ ಪೋಕ್ಸೋ ಕಾರ್ಯಾಗಾರ



ಹರಿಹರ, ಫೆ. 12 - ನಗರದ ಎಸ್.ಜೆ.ವಿ.ಪಿ. ಕಾಲೇಜಿನಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆ ಕುರಿತ ಕಾರ್ಯಾಗಾರ ನಡೆಸಲಾಯಿತು. ಕಾರ್ಯಾಗಾರದಲ್ಲಿ ನ್ಯಾಯವಾದಿ ಶುಭ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಪೂರ್ಣಿಮಾ, ವಕೀಲ ರಿಯಾಜ್, ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಕಾರಿ ಗೀತಾ, ಶಿಕ್ಷಣಾಧಿಕಾರಿ ತೀರ್ಥಪ್ಪ ಇತರರು ಭಾಗವಹಿಸಿದ್ದರು.

## ಕಾರು, ಟಿಪ್ಪರ್ ಡಿಕ್ಕಿ : ಅಪಾಯದಿಂದ ಪಾರು



**ಹೊನ್ನಾಳಿ**

ಹೊನ್ನಾಳಿ, ಫೆ.12- ಕಾರು ಮತ್ತು ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಚಾಲಕನಿಗೆ ಸಣ್ಣ-ಪುಟ್ಟ ಗಾಯಗಳಾಗಿರುವ ಘಟನೆ ತಾಲ್ಲೂಕಿನ ಅರಕೆರೆ ಎ.ಕೆ. ಕಾಲೋನಿ ಬಳಿ ಭಾನುವಾರ ಸಂಭವಿಸಿದೆ. ಅರಕೆರೆ ಎಸ್. ಜಿ. ಮಧುಗೌಡ ಗಾಯಗೊಂಡಿರುವ ಕಾರು ಚಾಲಕ.

ದಾವಣಗೆರೆಯಲ್ಲಿ ಭಾನುವಾರ ನಡೆದ ವಿವಾಹ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಅರಕೆರೆ ಗ್ರಾಮಕ್ಕೆ ವಾಪಸ್ಸಾಗುವ ಸಂದರ್ಭದಲ್ಲಿ ಹರಿಹರದ ಕಡೆಗೆ ತೆರಳುತ್ತಿದ್ದ ಟಿಪ್ಪರ್ ಅರಕೆರೆ ಎ.ಕೆ. ಕಾಲೋನಿ ಬಳಿ ಮಧುಗೌಡ ಪಯಣಿಸುತ್ತಿದ್ದ ಕಾರ್‌ಗೆ ಡಿಕ್ಕಿ ಹೊಡೆದಿದೆ. ಏರ್ ಬ್ಯಾಗ್‌ಗಳು ತೆರೆದುಕೊಂಡದ್ದರಿಂದ ಕಾರ್‌ನಲ್ಲಿದ್ದವರಿಗೆ ಅಪಾಯ ಆಗಿಲ್ಲ.


॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ವಾಸಿ
ಶ್ರೀ ಚಿಂದಿಗೌಡ್ರು ಹಾಲನಗೌಡ್ರು
ಇವರು ಮಾಡುವ ವಿಜ್ಞಾಪನೆಗಳು.
ದಿ.: 06.02.2023ನೇ ಸೋಮವಾರ ಬೆಳಿಗ್ಗೆ : 11.45 ಗಂಟೆಗೆ ನನ್ನ ಧರ್ಮಪತ್ನಿಯಾದ
ಚಿಂದಿಗೌಡ್ರು
**ಶ್ರೀಮತಿ ಜಯಮ್ಮ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 14.02.2023ನೇ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


ಇಂತಿ ದುಃಖತಪ್ತರು : ಚಿಂದಿಗೌಡ್ರು ಶ್ರೀ ಬಸವನಗೌಡ್ರು ಮತ್ತು ಶ್ರೀ ಹಾಲನಗೌಡ್ರು ಹಾಗೂ ಮಕ್ಕಳು, ಮೊಮ್ಮಕ್ಕಳು, ಮಾವಂದಿರು, ಅಳಿಯಂದಿರು, ಸೊಸೆಯಂದಿರು ಮತ್ತು ಚಿಂದಿಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ : 88847 11741, 91130 76652
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

**ಏಳನೇ ವರ್ಷದ ಪುಣ್ಯಸ್ಮರಣೆ**




**ಟಿ.ಎಸ್. ಶಿವಾನಂದಯ್ಯ**
(ಮಸಾಲೆ ಮಂಡಕ್ಕಿ ಮಂಜಣ್ಣ)
ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳು ತುಂಬಿ ಏಳು ವರ್ಷಗಳಾದವು.
ಸದಾ ನಿಮ್ಮ ನೆನಪು ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ ;
ಪತ್ನಿ : ಶ್ರೀಮತಿ ಶಾರದಮ್ಮ
ಪುತ್ರಿಯರು-ಅಳಿಯಂದಿರು : ಶ್ರೀಮತಿ ಮಂಜುಳ ಶ್ರೀ ಹೆಚ್.ಕೆ. ಚನ್ನಬಸಪ್ಪ (ಚಂದ್ರು)
ಶ್ರೀಮತಿ ವೀರಮ್ಮ ಶ್ರೀ ಚಂದ್ರಮೌಳಿ
ಮಗ-ಸೊಸೆ: ಶ್ರೀ ಶಿವಶಂಕರ್ ಶ್ರೀಮತಿ ಗೌರಮ್ಮ,
ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ: 95132 09905

**ಹತ್ತನೇ ವರ್ಷದ ಪುಣ್ಯಸ್ಮರಣೆ**



ಜನನ : 03.06.1955 ಮರಣ : 13.02.2013
**ದಿ॥ ಎ.ಎಸ್. ವಾಗೀಶ್**
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ನಿಮ್ಮ ನೆನಪು, ಆದರ್ಶ ಜೀವನ, ನಡೆ-ನುಡಿ ನಮಗೆಲ್ಲರಿಗೂ ದಾರಿದೀಪ.
ನೀವು ತೋರಿಸಕೊಟ್ಟ ಸನ್ಮಾರ್ಗದಲ್ಲಿ ನಾವು ಮುನ್ನಡೆಯುತ್ತಿದ್ದು, ಪರಮಾತ್ಮನು ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ
ಸದಾ ನಿಮ್ಮ ಸ್ಮರಣೆಯಲ್ಲಿರುವ.
ಧರ್ಮಪತ್ನಿ : ಶ್ರೀಮತಿ ನೀಲಮ್ಮ ವಾಗೀಶ್,
ಮಕ್ಕಳು, ಮೊಮ್ಮಗ ಹಾಗೂ ಅಪಾರ ಬಂಧು-ಬಳಗ.


**ಸಹದೇವಪ್ಪ ನಿಧನ**



ದಾವಣಗೆರೆ ಭಗತ್ ಸಿಂಗ್ ನಗರದ ವಾಸಿ, ಆಟೋ ಚಾಲಕರು, ಬನ್ನಿ ಮಹಾಂಕಾಳಿ ದೇವಸ್ಥಾನದ ಅಧ್ಯಕ್ಷರಾದ ಸಹದೇವಪ್ಪ (68) ಇವರು ದಿನಾಂಕ: 12-2-2023 ರ ಭಾನುವಾರ ಸಂಜೆ 7 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆ ದಿನಾಂಕ: 13-2-2023 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗದಲ್ಲಿನ ರಾಮನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

**ಶ್ರೀಮತಿ ಬಾಗಳಿ ನಿಂಗಮ್ಮ ನಿಧನ**



ದಾವಣಗೆರೆ ಗಾಂಧಿನಗರ 1ನೇ ಮೇನ್, 1ನೇ ಕ್ರಾಸ್ ವಾಸಿ ಬಾಗಳಿ ಹುಚ್ಚೆಂಗಪ್ಪ ಇವರ ತಾಯಿ ಬಾಗಳಿ ನಿಂಗಮ್ಮ (75) ಇವರು ದಿನಾಂಕ: 12-2-2023 ರ ಭಾನುವಾರ ರಾತ್ರಿ 7.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 13-2-2023 ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕ ರುದ್ರ ಭೂಮಿಯಲ್ಲಿ ನೆರವೇರಲಿದೆ.

# ಹರಳಹಳ್ಳಿ ಕೆರೆ ಅಭಿವೃದ್ಧಿಪಡಿಸಿದ ಧರ್ಮಸ್ಥಳ ಯೋಜನೆ




ಮಲೇಬೆನ್ನೂರು, ಫೆ.12- ಹರಳಹಳ್ಳಿ ಗ್ರಾಮದಲ್ಲಿ ಸುಮಾರು 18 ಎಕರೆ ವಿಸ್ತೀರ್ಣದಲ್ಲಿರುವ ಕೆರೆ ಬಹಳ ವರ್ಷಗಳಿಂದ ಅಭಿವೃದ್ಧಿ ಕಾಣದೇ ಜಾಲಿಮುಳ್ಳು, ಗಿಡ-ಗಂಟೆಗಳಿಂದ ಹೂಳು ತುಂಬಿಕೊಂಡಿತ್ತು.

ಈ ಕೆರೆಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ "ನಮ್ಮೂರು ನಮ್ಮ ಕೆರೆ" ಕಾರ್ಯಕ್ರಮದಡಿ ಶ್ರೀ ಆಂಜನೇಯ ಸ್ವಾಮಿ ಕೆರೆ ಸಮಿತಿ ಸಹಯೋಗದಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಕೆರೆಯ ಹೂಳು ತೆಗೆಸಿ ಸ್ವಚ್ಛ ಮಾಡಿಸುವ ಮೂಲಕ ಎಲ್ಲರ ಗಮನ ಸೆಳೆಯಲಾಗಿದೆ.

ಕಳೆದ ತಿಂಗಳು ಅಂದರೆ ಜನವರಿ 6 ರಂದು ಕೆರೆ ಹೂಳೆತ್ತುವ ಕಾಮಗಾರಿಗೆ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ್ ಅವರು ಸ್ಥಳೀಯ ರೈತರ ಸಮ್ಮುಖದಲ್ಲಿ ಪೂಜೆ ಸಲ್ಲಿಸಿ ಚಾಲನೆ ನೀಡಿದ್ದರು.

ಕೇವಲ ಒಂದೇ ತಿಂಗಳಲ್ಲಿ ಜೆಸಿಬಿ, ಇಟಾಚಿಗಳನ್ನು ಬಳಸಿ ಗ್ರಾಮದ ರೈತರ ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು ಕೆರೆಯನ್ನು ಸ್ವಚ್ಛಗೊಳಿಸಿ ಕೆರೆಯಲ್ಲಿ ಹೆಚ್ಚಿನ ಪ್ರಮಾಣ ನೀರು ಸಂಗ್ರಹವಾಗಿ ಅಂತರ್ಜಲ ಪ್ರಮಾಣ ಹೆಚ್ಚಾಗುವಂತೆ ಮಾಡಲಾಗಿದೆ ಎಂದು ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು ಸ್ಥಳಕ್ಕೆ ಭೇಟಿ ನೀಡಿದ್ದ ಪತ್ರಕರ್ತರಿಗೆ ಮಾಹಿತಿ ನೀಡಿದರು.

ಈ ಕಾಮಗಾರಿಯಲ್ಲಿ ಜೆಸಿಬಿ 550 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡಿದ್ದು 18,760 ಟ್ರ್ಯಾಕ್ಟರ್ ಲೋಡ್ ಕೆರೆಯ ಹೂಳನ್ನು ಹರಳಹಳ್ಳಿ, ಹಾಲಿವಾಣ, ಮಲ್ಲನಾಯ್ಕನಹಳ್ಳಿ, ಮಲೇಬೆನ್ನೂರು, ಕೊಪ್ಪ ಮತ್ತಿತರ ಗ್ರಾಮಗಳ ಬಂದು ಸಾವಿರಕ್ಕೂ ಹೆಚ್ಚು ರೈತರು ತಮ್ಮ ತೋಟಗಳಿಗೆ ತೆಗೆದುಕೊಂಡು ಹೋಗಿದ್ದಾರೆ.

ಒಟ್ಟು 10 ಲಕ್ಷ ರೂ. ಅನುದಾನದಲ್ಲಿ ಈಗಾಗಲೇ 8.54 ಲಕ್ಷ ರೂ. ಖರ್ಚಾಗಿದ್ದು, ಉಳಿದ ಹಣದಲ್ಲಿ ಕೆರೆಯ ಕೋಡಿ ಕಟ್ಟೆ ನಿರ್ಮಿಸಿ ಗೇಟ್ ಅಳವಡಿಸಲಾಗುವುದು. ಜೊತೆಗೆ ಕೆರೆ ಏರಿ ಅಭಿವೃದ್ಧಿಪಡಿಸಿ ಪಾದಚಾರಿಗಳ ಓಡಾಟಕ್ಕೂ ಅನುಕೂಲ ಮಾಡಲಾಗುವುದು. ಕೆರೆ ಏರಿಯ ರಸ್ತೆಯ ಅಕ್ಕ-ಪಕ್ಕದಲ್ಲಿ ಗಿಡಗಳನ್ನು ನೆಟ್ಟು, ಕಲ್ಲಿನ ಕುರ್ಚಿಗಳನ್ನು ಹಾಕುವ ಉದ್ದೇಶವಿದೆ ಎಂದು ವಸಂತ್ ದೇವಾಡಿಗ ತಿಳಿಸಿದರು.

**15 ಕೆರೆ ಅಭಿವೃದ್ಧಿ :** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಜನರ ಸಹಭಾಗಿತ್ವದಲ್ಲಿ ರಾಜ್ಯದಲ್ಲಿ 427 ಕೆರೆಗಳಿಗೆ ಹೊಸ ರೂಪ ನೀಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಇದುವರೆಗೆ 15 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸುಮಾರು 1 ಕೋಟಿ ರೂ. ಅನುದಾನವನ್ನು ಯೋಜನೆಯಿಂದ ನೀಡಲಾಗಿದೆ.

ಹರಿಹರ ತಾಲ್ಲೂಕಿನಲ್ಲಿ ಈ ಹಿಂದೆ ಜಿ.ಟಿ. ಕಟ್ಟೆ ಗ್ರಾಮದ ಕೆರೆಯನ್ನು ಅಭಿವೃದ್ಧಿ ಪಡಿಸಿದ್ದು, ಇದೀಗ ಹರಳಹಳ್ಳಿ ಗ್ರಾಮದ ಕೆರೆಗೆ ಕಾಯಕಲ್ಪ ನೀಡಲಾಗಿದೆ. ಕೆರೆ ಹೂಳು ತೆಗೆಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡ ಎಲ್ಲಾ ಕಡೆಗಳಲ್ಲಿ ಸ್ಥಳೀಯರ ಸಹಕಾರ ನಿರೀಕ್ಷೆಗೂ ಮೀರಿ ಸಿಕ್ಕಿರುವುದರಿಂದ ಡಾ. ವೀರೇಂದ್ರ ಹೆಗ್ಗಡೆಯವರ ಉದ್ದೇಶ ಸಫಲತೆ ಕಂಡಿದೆ ಎಂದು ಜಿಲ್ಲಾ ನಿರ್ದೇಶಕ ವಿಜಯ ಕುಮಾರ್ ನಾಗರಾಳ್ 'ಜನತಾವಾಣಿ'ಗೆ ತಿಳಿಸಿದರು.

**ಇನ್ನೊಷ್ಟು ಕಾಮಗಾರಿ :** ಹರಳಹಳ್ಳಿ ಗ್ರಾಮದ ಕೆರೆಗೆ ಇನ್ನೊಷ್ಟು ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ಯೋಗ ಖಾತ್ರಿ ಯೋಜನೆಯಡಿ ಕ್ರಿಯಾಯೋಜನೆ ಸಿದ್ಧಪಡಿಸುವುದಾಗಿ ಪತ್ರಕರ್ತರಿಗೆ ತಿಳಿಸಿದ ಶಾಂತಪ್ಪ ಅವರು, ಈ ಕೆರೆಯ ನೀರನ್ನು ಕುಡಿಯುವ ನೀರಿನ ಯೋಜನೆಗೆ ಬಳಕೆ ಮಾಡುವ ಉದ್ದೇಶವಿದ್ದು, ಕೆರೆಯಲ್ಲಿ ಮೀನು ಸಾಕಾಣಿಕೆಗೆ ಒತ್ತು ನೀಡಲಾಗುವುದೆಂದರು.

## ಮಾದರಿ ಕಾಮಗಾರಿಯ ಬಗ್ಗೆ ಗ್ರಾಮಸ್ಥರ ಹರ್ಷ

ಈ ವೇಳೆ ಮಾತನಾಡಿದ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮುದ್ದೇರ ಕರಿಬಸಪ್ಪ, ಚಿಕ್ಕೋಳ್ ಕೃಷ್ಣಪ್ಪ, ಏಳೂರು ಕರಿಬಸಪ್ಪ, ಹನುಮಂತಪ್ಪ ಮತ್ತಿರರರು ಸರ್ಕಾರದ ಅನುದಾನ ಎಷ್ಟೇ ಲಕ್ಷ ಗಳಾಗಿದ್ದರೂ ಈ ರೀತಿಯ ಗುಣಮಟ್ಟದ ಕೆಲಸ ಆಗುತ್ತಿರಲಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆರೆ ಹೂಳೆತ್ತುವ ಕಾಮಗಾರಿಯ ಉಸ್ತುವಾರಿ ವಹಿಸಿರುವ ಯೋಜನೆಯ ಕೃಷಿ ಅಧಿಕಾರಿ ಗಂಗಾಧರ್, ಗ್ರಾಮದ ರಂಗನಾಥ್, ಕೃಷ್ಣಪ್ಪ, ಅಣ್ಣಪ್ಪ, ರವಿಕುಮಾರ್, ಬೆಳ್ಳೂಡಿ ರಾಜಪ್ಪ, ಹಾಲಿವಾಣದ ಶಿವಕ್ಕ ಆಂಜನೇಯ ಮತ್ತಿತರರು ಈ ವೇಳೆ ಹಾಜರಿದ್ದರು.

# ಎರಡು ವಾರಗಳಿಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇಮಕ

ನವದೆಹಲಿ, ಫೆ. 12- ಎರಡು ವಾರಗಳಲ್ಲೇ ನಿವೃತ್ತರಾಗಲಿರುವ ಇಬ್ಬರನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಿಸಿದ ಬೆಳವಣಿಗೆ ಆಗಿದೆ.

ಗುಜರಾತ್ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಸೋನಿಯಾ ಗಿರಿಧರ್ ಗೋಕಣಿ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಅವರು ಫೆಬ್ರವರಿ 25ರಂದು ವಯೋನಿವೃತ್ತಿ ಪಡೆಯಲಿದ್ದಾರೆ. ಕಳೆದ ವಾರ ನಡೆದ ಸುಪ್ರೀಂ ಕೋರ್ಟ್ ಕೊಲೀಜಿಯಂ ಸಭೆಯಲ್ಲಿ ಅವರನ್ನು ನ್ಯಾಯಮೂರ್ತಿಯಾಗಿ ನೇಮಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಒರಿಸ್ಸಾ ಹೈಕೋರ್ಟ್ ನ್ಯಾಯಮೂರ್ತಿಯಾದ ಜಸ್ವಂತ್ ಸಿಂಗ್ ಅವರನ್ನು ತ್ರಿಪುರ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಅವರು ಫೆಬ್ರವರಿ 22ರಂದು ನಿವೃತ್ತರಾಗಲಿದ್ದಾರೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು 65ನೇ ವಯಸ್ಸಿಗೆ ನಿವೃತ್ತರಾಗುತ್ತಾರೆ. ಹೈಕೋರ್ಟ್ ನ್ಯಾಯಮೂರ್ತಿಗಳು 62ನೇ ವಯಸ್ಸಿನಲ್ಲಿ ನಿವೃತ್ತರಾಗುತ್ತಾರೆ.

# ಲೋಕ್ ಶಕ್ತಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಬಸವರಾಜಪ್ಪ ನೀರ್ಥಡಿ



ದಾವಣಗೆರೆ, ಫೆ.12- ಲೋಕ್ ಶಕ್ತಿ ಪಕ್ಷದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಬಸವರಾಜಪ್ಪ ನೀರ್ಥಡಿ ಅವರನ್ನು ನೇಮಕ ಮಾಡಿ ರಾಜ್ಯಾಧ್ಯಕ್ಷ ಚಂದ್ರಶೇಖರ್ ವಿ.ಸ್ಥಾವರಮಠ್ ಆದೇಶಿಸಿದ್ದಾರೆ.

# ಮಾಜಿ ಸೈನಿಕರಿಗೆ ಸರ್ಕಾರದಿಂದ ಸೌಲಭ್ಯಗಳು ಸಿಗುತ್ತಿಲ್ಲ



## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಎನ್.ಕೆ. ಶಿವಣ್ಣ ವಿಷಾದ

ಹರಪನಹಳ್ಳಿ, ಫೆ. 12- ಮಾಜಿ ಸೈನಿಕರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು, ಸೂಕ್ತ ಸ್ಥಾನ ಮಾನಗಳು ಸಿಗುತ್ತಿಲ್ಲ. ರಾಜಕಾರಣಿಗಳಿಗೆ ಕೇವಲ ನಮ್ಮ ಮತಗಳಷ್ಟೇ ಬೇಕಿದೆ. ಮುಂದಿನ ದಿನಗಳಲ್ಲಿ ಮೂಲ ಸೌಲಭ್ಯಗಳನ್ನು ನೀಡುವಂತೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಎನ್.ಕೆ. ಶಿವಣ್ಣ ಅವರು ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಬುಧವಾರ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ತಾಲ್ಲೂಕು ಘಟಕದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದಿಂದ ನಮಗೆ ಈವರೆಗೂ ಸಿಗಬೇಕಾದ ಸೌಲಭ್ಯಗಳು ಸರಿಯಾಗಿ ಸಿಕ್ಕಿಲ್ಲ. ಆದ್ದರಿಂದ ನಾವು ಸಂಘಟಿತರಾಗಿ ಹೋರಾಡಬೇಕಾಗಿದೆ ಎಂದು ಅವರು ಕರೆ ನೀಡಿದರು.

ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, ದೇಶದಲ್ಲಿ ರೈತ ಹಾಗೂ ಯೋಧರು ಎರಡು ಕಣ್ಣುಗಳು ಇದ್ದ ಹಾಗೆ. ರಾಜ್ಯದಲ್ಲಿ ನಿವೃತ್ತ ಸೈನಿಕರಿಗೆ ಕೇವಲ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸ ವ ಕಾರ್ಯಕ್ರಮಕ್ಕೆ ಸೀಮಿತವಾಗದೆ ಸಮಾ ಜದಲ್ಲಿ ಗೌರ ವ ಯುತ ಸ್ಥಾನ ನೀ ಡು ವಂತಾಗಬೇ ಕು ಎಂದು ಹೇಳಿದರು.

ಮಾಜಿ ಸೈನಿಕರ ವಿಜಯನಗರ ಜಿಲ್ಲಾ ಅಧ್ಯಕ್ಷ ಮಂಜುನಾಥ ಜಿ.ಎಸ್ ಮಾತನಾಡಿ, ದೇಶದ ಗಡಿ ಪ್ರದೇಶದಲ್ಲಿ ಯುದ್ಧಗಳಲ್ಲಿ ಸಾವು-ಬದುಕಿನ ಮಧ್ಯೆ ಬದುಕಿ ಬಂದ ನಿವೃತ್ತ ಸೈನಿಕರಿಗೆ ಮೂಲ ಸೌಕರ್ಯ ಕೊಡುವಲ್ಲಿ ಕಡೆಗಣನೆ ಮಾಡುತ್ತಿದೆ, ಹೀಗೆಯೇ ಮುಂದುವರೆದರೆ ಮುಂದಿನ ದಿನಗಳಲ್ಲಿ ಗಡಿ ಕಾಯುವ ಸೈನಿಕರ ಕೆಲಸಕ್ಕೆ ಯುವಕರು ಹಿಂದೇಟು ಹಾಕುವಂತೆ ಆಗುವುದು ಖಚಿತ ಎಂದು ಬೇಸರ ವ್ಯಕ್ತ ಪಡಿಸಿದರು.

ತಾಲ್ಲೂಕಿನ ಮಾಜಿ ಸೈನಿಕರ ಘಟಕದ ಅಧ್ಯಕ್ಷ ಜಿ.ದೇವೇಂದ್ರಪ್ಪ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ಮಾಜಿ ಸೈನಿಕರಿಗೆ ಕೊಡುವ ಭೂಮಿಗಾಗಿ ನೂರಾರು ಬಾರಿ ಅರ್ಜಿಗಳು ಹಾಕಿದರೂ ಇದುವರೆಗೂ ನಮಗೆ ಭೂಮಿ ಮಂಜೂರು ಮಾಡಿರುವುದಿಲ್ಲ. ನಾವು ಸುಮಾರು ವರ್ಷಗಳ ಕಾಲ ಹೆಂಡತಿ, ಮಕ್ಕಳಿಂದ ದೂರ ಆಗಿ ಪ್ರಾಣ ತ್ಯಾಗ ಮಾಡಿ ದೇಶದ ಸೇವೆ ಮಾಡಿ ಬಂದ ಮಾಜಿ ಸೈನಿಕರಿಗೆ ತಾಲ್ಲೂಕಿನ ಅಧಿಕಾರಿಗಳು, ರಾಜಕಾರಣಿಗಳು ಕಡೆಗಣನೆ ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ ಎಂದರು.

ಭಾರತ ಮತ್ತು ಪಾಕಿಸ್ತಾನ ಯುದ್ದದಲ್ಲಿ ಭಾಗವಹಿಸಿದ್ದ ಹರಪನಹಳ್ಳಿ ತಾಲ್ಲೂಕಿನ ನಾಲ್ಕು ಜನ ಮಾಜಿ ಸೈನಿಕರು ಹಾಗೂ ತಾಲ್ಲೂಕಿನ ಬಾಗಳಿ ಗ್ರಾಮದ ನಾಟಿ ಕೀಲು, ಮೂಳೆ ತಜ್ಞ ಪಂಡಿತ ಬಿ.ಬಿ.ಹೊಸೂರಪ್ಪ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಾಗಳಿ ಕೊಟ್ರೇಶಪ್ಪ, ಹೇಮಂತ್ ಕುಮಾರ್, ಈಶ್ವರ್ ನಾಯ್ಕ, ಬಾಗಳಿ ಶಿವಕುಮಾರ ಗೌಡ, ಕು. ಶಿಲ್ಪ ಗೌಡ, ನಟರಾಜ್, ನಿವೃತ್ತ ಸೈನಿಕ ಘಟಕ ಪದಾಧಿಕಾರಿಗಳಾದ ಗೌರವಾಧ್ಯಕ್ಷ ಶ್ರೀನಿವಾಸರಾವ್, ರೇಖಪ್ಪ, ಖಜಾಂಚಿ ಮಲ್ಲಿಕಾರ್ಜುನ, ಉಪಾಧ್ಯಕ್ಷ ಮಂಜುನಾಥ, ಬಸವಾಚಾರಿ, ಶಂಭುಲಿಂಗಪ್ಪ, ಶಾಂತಪ್ಪ, ವಿನೋದ ಪಾಟೀಲ್, ಅನಿಲಕುಮಾರ, ನಾಗನಗೌಡ, ಜೀವನ್, ಗೌಡಜ್ಜ, ಜಿ. ಬಸವರಾಜ, ಎಂ.ಮಂಜಪ್ಪ, ಹಾಲೇಶ, ಕರಿಯಪ್ಪ ಸೇರಿದಂತೆ ಮತ್ತು ಇತರರು ಉಪಸ್ಥಿತರಿದ್ದರು.

# ಅಪರೂಪದ ವ್ಯಕ್ತಿತ್ವದ ಪ್ರೊ. ಹನುಮಪ್ಪ



ದಾವಣಗೆರೆ, ಫೆ. 12- ಸರ್ಕಾರಿ ನಿಯಮಗಳನ್ನು ಅಕ್ಷರಶ: ಪಾಲಿಸುತ್ತಿದ್ದ ಹಾಗೂ ಸರ್ಕಾರದ ಕೆಲಸ ದೇವರ ಕೆಲಸವೆಂದು ನಂಬಿ ಬದುಕು ಸಾಗಿಸಿದ ದಿ. ಪ್ರೊ. ಹನುಮಪ್ಪ ಅವರದು ಅಪರೂಪದ ವ್ಯಕ್ತಿತ್ವ ಎಂದು ವಿಶ್ರಾಂತ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಬಣ್ಣಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೆಳಗಳಮನೆ ಬೋಸಯ್ಯ ಪುಸ್ತಕ ಮಾಲೆ ದಾವಣಗೆರೆ ಹಾಗೂ ಪ್ರೊ. ಹನುಮಪ್ಪ ಅಭಿಮಾನಿ ಬಳಗ ಮಾಯಕೊಂಡ ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ದಿ. ಪ್ರೊ. ಹನುಮಪ್ಪ ಅವರ ಕುರಿತ ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೆಂಗಳೂರು ವಿಧಾನಸೌಧದ ಮೇಲೆ ಬರೆದಿರುವ 'ಸರ್ಕಾರಿ ಕೆಲಸ ದೇವರ ಕೆಲಸ' ಎಂಬ ಘೋಷ ವಾಕ್ಯವನ್ನು ಅಕ್ಷರಶಃ ಪಾಲಿಸಿದ ಕೀರ್ತಿ ಪ್ರಾಂಶುಪಾಲರಾಗಿದ್ದ ದಿ. ಪ್ರೊ. ಹನುಮಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಸರ್ಕಾರ ರೂಪಿಸಿದ 32 ನಿಯಮಗಳನ್ನು ಶೇ. 50 ರಷ್ಟು ಪಾಲಿಸದೇ ಇರುವುದು ವಿಷಾದದ ಸಂಗತಿ. ಆದರೆ ಇದಕ್ಕೆ ಅಪವಾದ ಎನ್ನುವಂತೆ ಪ್ರೊ. ಹನುಮಪ್ಪ ಅವರು ಚಾಚೂ ತಪ್ಪದೇ ಸರ್ಕಾರದ ಎಲ್ಲಾ ನಿಯಮಗಳನ್ನು ಪಾಲಿಸುತ್ತಿದ್ದರು. ಕುಟುಂಬವನ್ನು ಮರೆತು ಸರ್ಕಾರಿ ಕೆಲಸ ದೇವರ ಕೆಲಸವೆಂದು ಭಾವಿಸಿದ್ದರು. ಅವರದು ಆದರ್ಶ ವ್ಯಕ್ತಿತ್ವ ಎಂದು ಕೊಂಡಾಡಿದರು.

ಇಂತಹ ಜನಸ್ನೇಹಿ ಪ್ರಾಂಶುಪಾಲರು, ಪ್ರಾಧ್ಯಾಪಕರನ್ನು ಗುರುತಿಸಿ ಸರ್ಕಾರದಿಂದ ಕೊಡಲ್ಪಡುವ 'ಸೇವಾ ರತ್ನ' ಪ್ರಶಸ್ತಿ ಇವರಿಗೆ ಲಭಿಸದಿರುವುದು ಬೇಸರದ ಸಂಗತಿಯಾಗಿದೆ. ಆದರೆ ಅವರ ಅಭಿಮಾನಿಗಳು ಸಂಸ್ಮರಣಾ ಸಮಾರಂಭ ಏರ್ಪಡಿಸುವ ಮೂಲಕ ಅವರ ಸೇವೆಯನ್ನು ಸ್ಮರಿಸುತ್ತಿರುವುದು ಸರ್ಕಾರದ ಪ್ರಶಸ್ತಿಗಿಂತ ಮಿಗಿಲಾದುದು ಎಂದು ಅಭಿಮಾನಿಗಳ ಕಾರ್ಯವನ್ನು ಪ್ರಶಂಸಿಸಿದರು.

ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದ ವಿಶ್ರಾಂತ ಪ್ರಾಚಾರ್ಯ ಪ್ರೊ.ಜಿ. ವಿಶ್ವೇಶ್ವರಪ್ಪ ಮಾತನಾಡಿ ಸರಳ, ಸಜ್ಜನಿಕೆಯ, ಮೃದು ಸ್ವಭಾವದ ಪ್ರೊ.ಹನುಮಪ್ಪ ಅವರಿಗೆ ಮಾಯಕೊಂಡ ಶರೀರವಾಗಿದ್ದರೆ, ಕಾಲೇಜು ಆತ್ಮವಾಗಿತ್ತು. ಅವರ ಕರ್ತವ್ಯ ನಿಷ್ಠೆ ಮೆಚ್ಚುವಂತಹದ್ದು, ಕ್ರಿಯಾಶೀಲ ವ್ಯಕ್ತಿತ್ವದ ಅವರು ಪೂಜೆಗೆ ಅರ್ಹರು ಮತ್ತು ಹುತಾತ್ಮರು ಎಂದು ಬಣ್ಣಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಪ್ರೊ. ಹನುಮಪ್ಪ ಅವರದು ಆದರ್ಶ ವ್ಯಕ್ತಿತ್ವ. ಅವರ ಸೇವೆ ಅನುಕರಣೀಯ. ಅವರ ಜೀವನ ಮಾದರಿಯಾದುದು ಎಂದು ಹೇಳಿದರು.

ಸತ್ತ ಮೇಲೆ ಯಾವುದೇ ವ್ಯಕ್ತಿಯ ಒಳಿತು, ಕೆಡಕುಗಳನ್ನು ಬಣ್ಣನೆ ಮಾಡುತ್ತಾರೆ. ಹುಟ್ಟು ಮತ್ತು ಸಾವಿನ ನಡುವಿನ ಜೀವಿತ ಅವಧಿಯಲ್ಲಿ ಸಾಧಿಸುವುದೇ ನಿಜವಾದ ಸಾಧನೆ ಎಂದರು.

ನಿವೃತ್ತ ಪೊಲೀಸ್ ಅಧೀಕ್ಷಕ ಎನ್. ರುದ್ರಮುನಿ, ಪುಸ್ತಕ ಸಂಪಾದಕ ಬಿ.ಟಿ. ಬೆಳಗಟ್ಟ (ತಿಪ್ಪೇಸ್ವಾಮಿ), ಪ್ರೊ. ಮಂಜಣ್ಣ, ಪತ್ರಕರ್ತ ಜಗದೀಶ್ ದಿ. ಪ್ರೊ. ಹನುಮಪ್ಪ ಅವರ ಸೇವೆಯನ್ನು ಶ್ಲಾಘಿಸಿದರು.

ಸಿದ್ದೇಶ್ ಸೊಕ್ಕೆ ಪ್ರಾರ್ಥಿಸಿದರು. ಪ್ರಾಂಶುಪಾಲ ಪ್ರೊ. ಎನ್.ಎಂ. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ.ಎಸ್. ಈಶ್ವರಪ್ಪ, ರಾಜಣ್ಣ, ಬಸವರಾಜಪ್ಪ ಮತ್ತಿತರರಿದ್ದರು.

# ಕರ್ನಾಟಕ ಬಾಸ್ಕೆಟ್‌ಬಾಲ್ ಲೀಗ್ : ಶಿವಮೊಗ್ಗ ಪ್ರಥಮ



ದಾವಣಗೆರೆ, ಫೆ. 12- ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಹಾಗೂ ಜಿಲ್ಲಾ ಬಾಸ್ಕೆಟ್‌ಬಾಲ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ಬಾಸ್ಕೆಟ್ ಬಾಲ್ ಲೀಗ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿಯ ಬಾಸ್ಕೆಟ್‌ಬಾಲ್ ತಂಡ ಗಳು ಈ ಒಂದು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು.

ಲೀಗ್ ಹಂತದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್ ಹಾಗೂ ಶಿವಮೊಗ್ಗ ಬಾಸ್ಕೆಟ್ ಬಾಲ್ ಕ್ಲಬ್ ತಂಡಗಳು ಫೈನಲ್ ತಲುಪಿದವು.

ರೋ ಮಾ ೦ ಚ ನ ಕಾ ರಿ ಯಾ ಗಿ ಕೂಡಿದ್ದ ಫೈನಲ್ ಪಂದ್ಯದಲ್ಲಿ ಶಿವಮೊಗ್ಗ ತಂಡವು ಒಂದು ಅಂಕದಿಂದ (55-54) ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿತು. ದಾವಣಗೆರೆ ತಂಡವು ಎರಡನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು.

3ನೇ ಸ್ಥಾನವನ್ನು ಬಳ್ಳಾರಿ ಬಾಸ್ಕೆಟ್ ಬಾಲ್ ಕ್ಲಬ್ ತನ್ನದಾಗಿಸಿ ಕೊಂಡಿತು. ಇದೇ ಸಂದರ್ಭದಲ್ಲಿ 16 ವರ್ಷ ವಯೋಮಿತಿ ಒಳಗಿನ ಬಾಲಕರ ಮತ್ತು ಬಾಲಕಿಯರ ಆಹ್ವಾನಿತ ಲೀಗ್ ಪಂದ್ಯವನ್ನು ಕೂಡ ಆಯೋಜಿಸಲಾಗಿತ್ತು. ಎರಡೂ ವಿಭಾಗದಲ್ಲೂ ದಾವಣಗೆರೆ ತಂಡಗಳು ಮೊದಲನೇ ಸ್ಥಾನ ಹಾಗೂ ಹೊಸಪೇಟೆ ತಂಡಗಳು ದ್ವಿತೀಯ ಸ್ಥಾನ ಪಡೆದವು.

ಫೈನಲ್ ತಲುಪಿದ ಎರಡೂ ತಂಡಗಳು ಬೆಂಗಳೂರಿನಲ್ಲಿ ನಡೆಯುವ ಫೈನಲ್ ಹಂತದ ಲೀಗ್ ಪಂದ್ಯಾವಳಿ ಯಲ್ಲಿ ಭಾಗವಹಿಸಲು ಅರ್ಹತೆ ಪಡೆದು ಕೊಂಡವು. ಪಂದ್ಯಾವಳಿಯ ಅತ್ಯುತ್ತಮ ಶೂಟರ್ ಆಗಿ ಶಿವಮೊಗ್ಗ ತಂಡದ ಅನಿಲ್ ರಾಜ್ ಅವರು ಹಾಗೂ ಪಂದ್ಯಾವಳಿಯ ಅತ್ಯುತ್ತಮ ಆಟಗಾರನಾಗಿ ದಾವಣಗೆರೆಯ ರವಿರಾಜ್ ಅವರು ಆಯ್ಕೆಗೊಂಡರು.

ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಮಂಜುನಾಥ ಗಡಿಗುಡಾಳ್, ಹಿರಿಯ ಬಾಸ್ಕೆಟ್‌ಬಾಲ್ ಕ್ರೀಡಾಪಟು ಗಳಾದ ಸಂಗಪ್ಪ, ಶಾಂತಿನಾಥ್ ಬೋಂದಾಡೆ, ರವಿ ಪಲ್ಲಾಗಟ್ಟೆ, ವಿಜಯ್ ಕುಮಾರ್ ಹಾಗೂ ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆಯ ಉಪಾಧ್ಯಕ್ಷ ಗುಣಶೇಖರ್ ಹಾಜರಿದ್ದು, ಗೆದ್ದ ತಂಡ ಗಳಿಗೆ ಹಾಗೂ ಅತ್ಯುತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಬಾಸ್ಕೆಟ್ ಬಾಲ್ ಸಂಸ್ಥೆ ಸಹ ಕಾರ್ಯದರ್ಶಿ ದೇವಗಿರಿ ಪ್ರಭಾಕರ್ ಸ್ವಾಗತಿಸಿದರು. ದಾವಣಗೆರೆ ಜಿಲ್ಲಾ ಬಾಸ್ಕೆಟ್‌ಬಾಲ್ ಸಂಸ್ಥೆಯ ಕ್ರೀಡಾ ಪಟು ರವಿರಾಜ್ ಅವರು ಬಾಸ್ಕೆಟ್‌ಬಾಲ್ ಲೀಗ್ ಪ್ರಾರಂಭಿಸಿದ ಗೋವಿಂದರಾಜ್ ಅವರ ಬಗ್ಗೆ ಹಾಗೂ ಪಂದ್ಯಾವಳಿಯ ಬಗ್ಗೆ ಮಾಹಿತಿ ನೀಡಿದರು.

ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಹಾಗೂ ಖೇಲೋ ಇಂಡಿಯಾ ಬಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ದಾವಣಗೆರೆಯಿಂದ ಆಯ್ಕೆ ಯಾದ ವಿಷ್ಣು ಎನ್.ಎಂ ಮತ್ತು ನಿತಿನ್‌ಕುಮಾರ್ ಅವರನ್ನು ದಾವಣಗೆರೆ ಜಿಲ್ಲಾ ಬಾಸ್ಕೆಟ್‌ಬಾಲ್ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಜಿಲ್ಲಾ ಬಾಸ್ಕೆಟ್ ಬಾಲ್ ಸಂಸ್ಥೆಯ ಕಾರ್ಯದರ್ಶಿ ವೀರೇಶ್ ವಂದಿಸಿದರು.

ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಕೆ.ಎನ್. ಗೋಪಾಲಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಕ್ರೀಡಾಪಟುಗಳಾದ ದರ್ಶನ್, ಸಚಿನ್ ಇನ್ನಿತರರು ಉಪಸ್ಥಿತರಿದ್ದರು.

# ಅಧ್ಯಕ್ಷರಾಗಿ ಪ್ರೊ. ಲಿಂಗಪ್ಪ

(1ನೇ ಪುಟದಿಂದ) ಸಾಹಿತ್ಯಿಕವಾಗಿ ಜನರಪರವಾದ ಶೈಕ್ಷಣಿಕ, ಸಾಂಸ್ಕೃತಿಕ ವೈಭವದ ಮೆರಗಿನ ಕನ್ನಡ ಹಬ್ಬಕ್ಕೆ ಪ್ರತಿಯೊಬ್ಬರು ಕೈಜೋಡಿಸಿ ಕೆಲಸ ಮಾಡುವಂತೆ ಮನವಿ ಮಾಡಿದರು.

ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ವಕೀಲರಾದ ಆರ್ ಓಬಳೇಶ್ ಮಾತನಾಡಿ, ಪ್ರೊ. ಎಚ್. ಲಿಂಗಪ್ಪ ಅವರು ಸಮರ್ಥವಾದ ಬರಹಗಾರರಾಗಿ 36 ಗ್ರಂಥಗಳನ್ನು ರಚಿಸಿ, ಸಾಹಿತ್ಯ ದಿಗ್ಗಜರಾಗಿದ್ದಾರೆ. ಇಂತಹ ಹಿರಿಯ ಸಾಹಿತಿಗಳಿಂದ ಯುವ ಕವಿಗಳಿಗೆ ಸ್ಫೂರ್ತಿಯಾಗಲಿದೆ ಎಂದರು.

ಕಸಾಪ ಸದಸ್ಯ ನಾಗಲಿಂಗಪ್ಪ ಮಾತನಾಡಿ, ಕನ್ನಡ ನಾಡಿನ ಈ ನೆಲದ ಸಾಹಿತ್ಯ ಸಂಸ್ಕೃತಿಯ ವೈಶಿಷ್ಟ್ಯ ಪರಂಪರೆಯನ್ನು ಸಾರುವ ಕನ್ನಡ ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸುವ ನಿಟ್ಟಿನಲ್ಲಿ ಕಾರ್ಯಗಳು ಚುರುಕುಗೊಂಡಿವೆ. ಕ್ಷೇತ್ರದ ಶಾಸಕ ಎಸ್.ವಿ. ರಾಮಚಂದ್ರ ಹಾಗೂ ತಹಶೀಲ್ದಾರ್ ಜಿ ಸಂತೋಷಕುಮಾರ್ ಸಹಕಾರದಿಂದ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು. ಕಸಾಪ ಗೌರವ ಕಾರ್ಯದರ್ಶಿ ಗೀತಾ ಮಂಜು, ಸಂಘಟನಾ ಕಾರ್ಯದರ್ಶಿ ಚಂಪಾವತಿ, ಕಸಾಪ ಪದಾಧಿಕಾರಿಗಳಾದ ಕೃಷ್ಣಮೂರ್ತಿ, ಗೌರಮ್ಮ, ಎಂ.ರಾಜಪ್ಪ, ಶಿಕ್ಷಕಿ ಶಿವಮ್ಮ ಮತ್ತಿತರರು ಹಾಜರಿದ್ದರು.

# ನಗರದಲ್ಲಿ ಬನಶಂಕರಿ ದೇವಿಗೆ ವಿಶೇಷ ಪೂಜೆ



ದಾವಣಗೆರೆ, ಫೆ.12- ನಗರದ ಹಳೆ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಿಗೆ ಮಾಘ ಮಾಸದ ಮೂರನೇ ಶುಕ್ರವಾರವಾದ ಇಂದು ಬನಶಂಕರಿ ದೇವಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ಬುತ್ತಿ ಅಲಂಕಾರವನ್ನು ಮಾಡಲಾಗಿತ್ತು. ಪ್ರತಿ ಶುಕ್ರವಾರದ ಪ್ರಸಾದ ವಿತರಣೆಯ ಸೇವಾಕರ್ತರು ಶ್ರೀಮತಿ ಶೋಭಾ ಸುಬ್ರಹ್ಮಣ್ಯ (ಲಕ್ಷ್ಮಿನರಸಿಂಹ ಟ್ರೇಡರ್) ಇವರು ನೆರವೇರಿಸಿದರು.

# ತಾಪಮಾನ ತಡೆಗೆ ಚಂದ್ರನ ಮೇಲೆ ದೂಳಿನ ಮೋಡ!

(1ನೇ ಪುಟದಿಂದ) ಚಂದ್ರನ ಮೇಲೆ ದೂಳು ಹರಡುವುದು ಒತ್ತಟ್ಟಿಗಿರಲಿ, ಬಾಹ್ಯಾಕಾಶದಲ್ಲಿ ಮಾನವ ಚಟುವಟಿಕೆಯಿಂದ ಹೆಚ್ಚಾಗುತ್ತಿರುವ ತ್ಯಾಜ್ಯ ನಿವಾರಿಸುವ ಬಗೆಗಿನ ಪ್ರಶ್ನೆಗಳಿಗೇ ಇನ್ನೂ ಉತ್ತರ ಸಿಕ್ಕಿಲ್ಲ.

ಈ ರೀತಿಯ ಕಾರ್ಯಸಾಧುವಲ್ಲದ ಯೋಜನೆಗಳಿಂದ ಪ್ರಯೋಜನಕ್ಕಿಂತ ಅಪಾಯವೇ ಹೆಚ್ಚು ಎಂದು ಇಂಪೀರಿಯಲ್ ಕಾಲೇಜ್ ಆಫ್ ಲಂಡನ್‌ನ ಜೊವನ್ನಾ ಹೈ ಹೇಳಿದ್ದಾರೆ.

ಇಂತಹ ಯೋಜನೆಗಳಿಂದ ಪರಿಸರ ಬದಲಾವಣೆ ತಡೆಯಬಹುದು ಎಂದು ಕೆಲವರು ನೆಪ ಹೇಳುತ್ತಾ, ಈಗಿರುವ ಮಾಲಿನ್ಯ ತಡೆಯಲು ಮುಂದಾಗದೇ ಇರಬಹುದು ಎಂದವರು ಎಚ್ಚರಿಸಿದ್ದಾರೆ.

# ಫುಟ್‌ಬಾಲ್ : ನ್ಯಾಷನಲ್ ಪಬ್ಲಿಕ್ ಶಾಲೆ ಸಾಧನೆ



ದಾವಣಗೆರೆ, ಫೆ. 12- ಕರ್ನಾಟಕ ರಾಜ್ಯ ಫುಟ್ಬಾಲ್ ಅಸೋಸಿಯೇಷನ್ ಜೆಎಸ್‌ಡಬ್ಲ್ಯು ಶಾಕರ್ ಶೀಲ್ಡ್ 2022-23 ಇವರು ಆಯೋಜಿಸಿದ್ದ ರಾಜ್ಯಮಟ್ಟದ ಫುಟ್ಬಾಲ್ ಸ್ಪರ್ಧೆಯಲ್ಲಿ ನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ವಿವನ್ ಶೆಟ್ಟಿ, ಧ್ರುವ್ ಎಂ. ಕಿಶನ್, ಕು. ವೈಭವಿ ಮತ್ತು ವೈಷ್ಣವಿ ಇವರು ಅತ್ಯುತ್ತಮ ಸ್ಥಾನ ಗಳಿಸಿಕೊಂಡಿರುತ್ತಾರೆ.

# ನಗರದಲ್ಲಿ ಇಂದು ಮತ್ತು ನಾಳೆ ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಇಂದು ಮತ್ತು ನಾಳೆ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ :08192-233787.


**ಪ್ರಿಯದರ್ಶಿನಿ ವಿದ್ಯಾಸಂಸ್ಥೆ (ರಿ.) ಪ.ಜಾತಿ ಅಣಬೂರು, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.**
**ಜಿ.ಹನುಮಂತರೆಡ್ಡಿ ಸ್ಮಾರಕ ವಸತಿ ಪ್ರೌಢಶಾಲೆ ಜಗಳೂರು ಟೌನ್ ದಾವಣಗೆರೆ ಜಿಲ್ಲೆ.**

**ನೇಮಕಾತಿ ಪ್ರಕಟಣೆ**

ಮಾನ್ಯ ಅಧೀನ ಕಾರ್ಯದರ್ಶಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಆದೇಶ ಸಂಖ್ಯೆ :ED30SEP2014, **ದಿನಾಂಕ:04-05-2015,** ಇವರ ಆದೇಶದ ಮೇರೆಗೆ, ಮಾನ್ಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿ8 (3) ಶಾಶಿಅ.ನೇ ಅನು/ಇ 996273/2022 ದಿನಾಂಕ: 07-02-2023, ನಮ್ಮ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ **ಜಿ ಹನುಮಂತರೆಡ್ಡಿ ಸ್ಮಾರಕ ವಸತಿ ಪ್ರೌಢ ಶಾಲೆ ಜಗಳೂರು ಟೌನ್ ದಾವಣಗೆರೆ ಜಿಲ್ಲೆ (ಅನುದಾನಿತ) ಪ್ರೌಢ ಶಾಲೆಯಲ್ಲಿ** ಇರುವ ಖಾಲಿ ಹುದ್ದೆ ಭರ್ತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸರ್ಕಾರದ ನಿಯಮದಂತೆ ಅರ್ಹ ವಿದ್ಯಾರ್ಹತೆ ಮತ್ತು ವಯೋಮಿತಿವುಳ್ಳ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಅವಶ್ಯಕ ದಾಖಲೆಗಳ ಜೆರಾಕ್ಸ್ ಪ್ರತಿ ಹಾಗೂ ರೂ.500/-(ಐದುನೂರು ರೂಪಾಯಿ) ಗಳ ಡಿ.ಡಿಯನ್ನು ಪ್ರಿಯದರ್ಶಿನಿ ವಿದ್ಯಾಸಂಸ್ಥೆ (ರಿ) ಪ.ಜಾತಿ ಅಣಬೂರು, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ಹೆಸರಿನಲ್ಲಿ ಪಡೆದು ಇದೇ ವಿಳಾಸಕ್ಕೆ ಅರ್ಜಿಸಲ್ಲಿಸ ಬೇಕು ಮತ್ತೊಂದು ಪ್ರತಿಯನ್ನು ಕಡ್ಡಾಯವಾಗಿ ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ಜಿಲ್ಲೆ ಇವರಿಗೆ ಪತ್ರಿಕೆ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗಾಗಿ ಅರ್ಜಿ ಸಲ್ಲಿಸಬೇಕು ಸಂದರ್ಶನದ ದಿನಾಂಕವನ್ನು ನೊಂದಾಯಿತ ಅಂಚೆ ಮೂಲಕ ಅರ್ಜಿಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

| ಕ್ರ.ಸಂ | ಹುದ್ದೆ | ಮೀಸಲಾತಿ ಬಿಂದು | ಮೀಸಲಾತಿ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|---|---|
| 01 | ಆಂಗ್ಲ ಬಾಷಾ ಶಿಕ್ಷಕರು | ಪರಿಶಿಷ್ಟ ಪಂಗಡ ನಾಯಕ (ಎಸ್.ಟಿ) | ಪರಿಶಿಷ್ಟ ಪಂಗಡ ನಾಯಕ (ಎಸ್.ಟಿ.) | ಬಿ.ಎ, ಬಿ.ಇ.ಡಿ, (ಪದವಿಯಲ್ಲಿ ಆಂಗ್ಲ ಐಚ್ಛಿಕ ವಿಷಯ) | 33,450-62600 |

ದಿನಾಂಕ: 11-02-2023
ಸ್ಥಳ: ಜಗಳೂರು

ಸಹಿ/-
ಕಾರ್ಯದರ್ಶಿಗಳು
ಪ್ರಿಯದರ್ಶಿನಿ ವಿದ್ಯಾಸಂಸ್ಥೆ (ರಿ) ಪ.ಜಾತಿ ಅಣಬೂರು
ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.



**ಸಾರ್ವಜನಿಕ ಪ್ರಕಟಣೆ**


ಈ ಮೂಲಕ ಸಮಸ್ತ ಸಾರ್ವಜನಿಕರೆಲ್ಲರಿಗೂ ತಿಳಿಸ ಬಯಸುವುದೇನೆಂದರೆ - ನಮ್ಮ ಕಕ್ಷಿದಾರರಾದ ಶ್ರೀ ಶೇಖರ್ ಎನ್.ಎಸ್. ಬಿನ್ ಜಯದೇವಮೂರ್ತಿ ಹಾಲಿ ವಸತಿ – 6ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ ವಾಸಿಗಳಾದ - ಇವರು ಈ ಕೆಳಗೆ ವಿವರಿಸಿದ ಸೊತ್ತನ್ನು ಅದರ ಹಕ್ಕುದಾರಿ ಸ್ವಾಧೀನಾನುಭವಿಗಳು ಮತ್ತು ಖಾತಾದಾರಿ ಮಾಲೀಕರಾದ ಶ್ರೀ ಉದಯ್ ಶಿವಕುಮಾರ್ ಬಿನ್ ರಾಜಣ್ಣ, ಡೋರ್ ನಂ.1924/ಎ 196, ಬನಶಂಕರಿ ಬಡಾವಣೆ, ದಾವಣಗೆರೆ ವಾಸಿ ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸುತ್ತಿದ್ದು; ಷೆಡ್ಯೂಲ್ ಸೊತ್ತಿನ ಮೇಲೆ ಯಾವುದೇ ವ್ಯಕ್ತಿ, ಸಂಸ್ಥೆ, ಇತ್ಯಾದಿಯವರಾರದ್ದೇ ಆಗಲೀ ಕಾನೂನಿನಡಿಯಲ್ಲೂ ಮತ್ತು ಯಾವುದೇ ವಿಧದಲ್ಲೂ, ಯಾವುದೇ ಹಕ್ಕು, ಅಡವು, ಆಸಕ್ತಿ ವಗೈರೆ ಹೊಂದಿದ್ದಲ್ಲಿ ಅಂತಹವರು ಈ ತಾರೀಖಿನಿಂದ ಹತ್ತು (10) ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಅಥವಾ ಸದರಿ ನನ್ನ ಕಕ್ಷಿದಾರರ ಸದರಿ ವಿಳಾಸಕ್ಕೆ, ಕಾನೂನು ರೀತ್ಯಾ ತಮ್ಮ ಅಂತಹ ಹಕ್ಕು, ಆಸಕ್ತಿ, ಅಡವು ವಗೈರೆ ಇತ್ಯಾದಿ ಇತ್ಯಾದಿಗಳನ್ನು ಸ್ಥಾಪಿಸುವಂತಹ ಅಥವಾ ಸಾಬೀತು ಗೊಳಿಸತಕ್ಕಂತಹ ಸೂಕ್ತ ದಾಖಲೆಗಳೊಂದಿಗೆ **ಲಿಖಿತವಾಗಿಯೇ ತಮ್ಮ ತಕರಾರನ್ನು ತಿಳಿಸುವುದು,** ಇಲ್ಲವಾದಲ್ಲಿ ಷೆಡ್ಯೂಲ್ ಸೊತ್ತಿನ ಮೇಲೆ ಕಾನೂನು ರೀತ್ಯಾ ಯಾರದ್ದೂ ಎಂದಿಗೂ ಯಾವುದೇ ತರಹದ ಹಕ್ಕು, ಅಡವು, ಆಸಕ್ತಿ ವಗೈರೆ ಇತ್ಯಾದಿ ಇಲ್ಲವೆಂದು ಪರಿಗಣಿಸಿ, ಸದರಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸೊತ್ತನ್ನು ಖರೀದಿಸುವ ಬಗ್ಗೆ ಶುದ್ಧ ಕ್ರಯ ಪತ್ರವನ್ನು ಮಾಡಿಸಿ ಕೊಳ್ಳುವವರಿದ್ದಾರೆ. ಮತ್ತು ನಂತರದಲ್ಲಿ ಯಾವುದೇ ವ್ಯಕ್ತಿಯಾ ಸಂಸ್ಥೆ ಇತ್ಯಾದಿಯವರು ಯಾರೇ ಆಗಲಿ, ತಾವೂ ಸಹ ಷೆಡ್ಯೂಲ್ ಸೊತ್ತಲ್ಲಿ ಕಾನೂನಿನಡಿಯಲ್ಲಿ ಯಾವ ರೀತಿಯಲ್ಲಿ ಮತ್ತು / ಅಥವಾ ಯಾವುದೋ ಪ್ರಮಾಣದಲ್ಲಿ, ತಾವೂ ಸಹ ಹಕ್ಕು, ಋಣ, ಸ್ವಾಧೀನಾನುಭವ ಇತ್ಯಾದಿಗಳನ್ನು ಹೊಂದಿದ್ದೇವೆಂದು, ಯಾವುದೇ ತರಹದ ತಂಟೆ-ತಕರಾರು ಮಾಡಲು, ಹಕ್ಕು ಸ್ಥಾಪಿಸಲು ಪ್ರಯತ್ನಿಸಿದಲ್ಲಿ, ಆಗ ಅಂತಹ ಯಾವುದೇ ವ್ಯಕ್ತಿ, ಸಂಸ್ಥೆ ಇತ್ಯಾದಿ ಯಾರೇ ಆಗಲಿ, ಯಾವುದೇ ತರಹದ ಹಕ್ಕನ್ನೂ ಪಡೆಯಲಾರರು ಮತ್ತು ಕಾನೂನಿನಡಿಯಲ್ಲಿ ತಮ್ಮ ಅಂತಹ ಹಕ್ಕು ಕಳೆದು ಕೊಂಡಿರುತ್ತಾರೆಂದೂ ಮತ್ತು ಸದರಿ ನಮ್ಮ ಕಕ್ಷಿದಾರರನ್ನು ಕಾನೂನು ರೀತಿ ಯಾವುದೇ ರೀತಿಯಲ್ಲಿ ಜವಾಬ್ದಾರರನ್ನಾಗಲೀ ಹೊಣೆಗಾರರನ್ನಾಗಿ ಬಾಧಿಸುವಂತೆ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ರೀತಿ ತಿಳಿಸುವ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದು, ಎಲ್ಲರೂ ತಿಳಿಯಿರಿ.

**ಷೆಡ್ಯೂಲ್**

ದಾವಣಗೆರೆ ಮಹಾನಗರ ಪಾಲಿಕೆಗೆ ಒಳಪಟ್ಟ ಕುಂದುವಾಡ ವಿಭಾಗದಲ್ಲಿರುವ ಮತ್ತು ಈ ಹಿಂದೆ ಸದರಿ ಕುಂದುವಾಡ ಗ್ರಾಮದ ರಿ.ಸರ್ವೆ ನಂ. 227 ಎಕರೆ 7-23 ಗುಂಟೆ ವಿಸ್ತೀರ್ಣವುಳ್ಳ ಅಲಿನೇಷನ್ ಆದ ಜಮೀನಿನಲ್ಲಿ ವಿಂಗಡಿಸಿ ಮಾಡಿರುವ ಕಂಬೈನ್ಡ್ ಲೇಔಟ್‌ನಲ್ಲಿ ಬರತಕ್ಕ - ಸೈಟ್ ನಂ. 147 ಇದರ ಡೋರ್ ನಂ.4117/147 ; ಅಳತೆ: 9.14x15.24 ಮೀಟರ್‌ಗಳುಳ್ಳ ಸೊತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ - ಸೈಟ್ ನಂ.146; ಪಶ್ಚಿಮಕ್ಕೆ - ಸೈಟ್ ನಂ. 148; ಉತ್ತರಕ್ಕೆ - ರಸ್ತೆ ಮತ್ತು ದಕ್ಷಿಣಕ್ಕೆ - ಸೈಟ್ ನಂ. 166.

**ಎಸ್.ಸಿದ್ಧವೀರಪ್ಪ** ಬಿಕಾಂ., ಎಲ್‌ಎಲ್.ಬಿ.,
ಅಡ್ವೊಕೇಟ್, 6ನೇ ಮೇನ್, ಪಿ.ಜೆ.ಬಡಾವಣೆ,
ದಾವಣಗೆರೆ. ಮೊಬೈಲ್ ನಂ. **94488 12711**
ದಿನಾಂಕ : 7.02.2023

# ಬೆಂಗಳೂರಿನಲ್ಲಿ ವಿಮಾನ ಉತ್ಪಾದನೆ ದೂರವಿಲ್ಲ : ಸಿಎಂ ಬೊಮ್ಮಾಯಿ



ಬೆಂಗಳೂರು, ಫೆ. 12 – ಬೆಂಗಳೂರಿನಲ್ಲಿ ಭಾರತ ತನ್ನದೇ ಆದ ವಿಮಾನ ಉತ್ಪಾದಿಸುವ ದಿನಗಳು ಬಹಳ ದೂರವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಏರೋ ಇಂಡಿಯಾ ಪ್ರದರ್ಶನದ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಬೊಮ್ಮಾಯಿ, ಬೆಂಗಳೂರಿನಲ್ಲಿ ವಿಮಾನ ಉತ್ಪಾದಿಸುವ ಕುರಿತು ವಿಶ್ವದಾದ್ಯಂತ ಇರುವ ಉದ್ಯಮಗಳ ಜೊತೆ ಮಾತುಕತೆ ನಡೆದಿದೆ ಎಂದರು.

ಬೆಂಗಳೂರಿನ ಉತ್ಪಾದಕರು ವಿಮಾನಗಳಿಗೆ ಅಗತ್ಯ ಎಲ್ಲ ಭಾಗಗಳನ್ನು ಉತ್ಪಾದಿಸುತ್ತಿದ್ದಾರೆ. ಭಾರತದಲ್ಲೇ, ಅದರಲ್ಲೂ ಬೆಂಗಳೂರಿನಲ್ಲಿ ನಮ್ಮದೇ ಆದ ವಿಮಾನ ಉತ್ಪಾದಿಸುವ ದಿನ ದೂರ ಇಲ್ಲ ಎಂಬುದು ನನ್ನ ಮಹತ್ವಾಕಾಂಕ್ಷೆಯ ಕನಸು ಎಂದವರು ತಿಳಿಸಿದರು.

ಸೋಮವಾರದಿಂದ ಬೆಂಗಳೂರಿನಲ್ಲಿ 14ನೇ ಏರೋ ಇಂಡಿಯಾ ಪ್ರದರ್ಶನ ಆರಂಭವಾಗಲಿದೆ. ಏರೋಸ್ಪೇಸ್ ಉದ್ಯಮಕ್ಕೆ ಬೆಂಗಳೂರು ತಾಣ ಹಾಗೂ ಭವಿಷ್ಯವಾಗಿದೆ. ಹೀಗಾಗಿ ಏರೋ ಇಂಡಿಯಾ ಪ್ರದರ್ಶನಕ್ಕೆ ಬೆಂಗಳೂರು ಅತ್ಯುತ್ತಮ ಸ್ಥಳ ಎಂದು ಬೊಮ್ಮಾಯಿ ತಿಳಿಸಿದರು.

# ಜನರಲ್ಲಿ ಕುಷ್ಠರೋಗದ ಬಗ್ಗೆ ಅರಿವು ಅತ್ಯವಶ್ಯಕ



## ವೈದ್ಯಾಧಿಕಾರಿ ಡಾ.ನವ್ಯ

ಮಲೇಬೆನ್ನೂರು, ಫೆ.12- ದೇವರಬೆಳಕೆರೆ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸೋಮವಾರ ಕುಷ್ಠರೋಗ ವಿರೋಧಿ ದಿನ ಕಾರ್ಯಕ್ರಮವನ್ನು ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ನವ್ಯ ಮಾತನಾಡಿ, ಕುಷ್ಠ ರೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಅತ್ಯವಶ್ಯಕವಾಗಿದ್ದು, ಇದು ಚರ್ಮ ಹಾಗೂ ನರಕ್ಕೆ ಸಂಬಂಧಿಸಿದ ಕಾಯಿಲೆಯಾಗಿರುವುದರಿಂದ ಯಾವುದೇ ಕಾರಣಕ್ಕೂ ಚರ್ಮಕ್ಕೆ ಸಂಬಂಧಿಸಿದ ಬಿಳಿ ಮಚ್ಚೆಗಳನ್ನು ನಿರ್ಲಕ್ಷಿಸದೇ ವೈದ್ಯರಿಗೆ ತೋರಿಸಿ ಚಿಕಿತ್ಸೆ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ತಾಲ್ಲೂಕು ಹಿರಿಯ ಆರೋಗ್ಯ ಮೇಲ್ವಿಚಾರಕ ಎಂ.ಉಮ್ಮಣ್ಣ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಶಾಲೆಯ ಪ್ರಾಂಶುಪಾಲ ಪ್ರಶಾಂತ್ ರಾಜ್ ಮಾತನಾಡಿ, ಮಕ್ಕಳಲ್ಲಿ ಕುಷ್ಠರೋಗದ ಬಗ್ಗೆ ಅರಿವು ಮೂಡಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ. ಅಜರುದ್ದೀನ್, ಸಿಬ್ಬಂದಿಗಳಾದ ಶ್ರೀಮತಿ ಲಕ್ಷ್ಮಿದೇವಿ, ಶ್ರೀಮತಿ ನಯನ ರೆಡ್ಡಿ, ಶ್ರೀಮತಿ ರೇಖಾ, ಪರಶುರಾಮಪ್ಪ ಹಾಗೂ ಆದರ್ಶ ಸೇರಿದಂತೆ ಆಶಾ ಕಾರ್ಯಕರ್ತೆಯರು, ಮುರಾರ್ಜಿ ಶಾಲೆಯ ಶಿಕ್ಷಕರು ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು. ಆರೋಗ್ಯ ನಿರೀಕ್ಷಣಾಧಿಕಾರಿ ಆದರ್ಶ ಕಾರ್ಯಕ್ರಮ ನಿರೂಪಿಸಿದರು.

# ವಿದುಷಿ ಶೋಭಾ ರಂಗನಾಥ್ ಅವರಿಗೆ 'ಸ್ವಾಮಿ ವಿವೇಕಾನಂದ' ಸದ್ಭಾವನಾ ಪ್ರಶಸ್ತಿ

ದಾವಣಗೆರೆ, ಫೆ. 12- ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಸಂಗೀತ ಶಿಕ್ಷಕಿ, ವಿದುಷಿ ಶೋಭಾ ರಂಗನಾಥ್ ಅವರಿಗೆ 'ಸ್ವಾಮಿ ವಿವೇಕಾನಂದ' ಸದ್ಭಾವನಾ ಪ್ರಶಸ್ತಿ ಲಭಿಸಿದೆ.

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಂಗಳೂರು, ವಿಜಯಪುರ ಜಿಲ್ಲೆ ಹಾಗೂ ತಾಲ್ಲೂಕು ಘಟಕಗಳು ಮುದ್ದೇಬಿಹಾಳ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿಜಯಪುರ, ಧರ್ಮಯುದ್ಧ ದಿನಪತ್ರಿಕೆ ಬಳಗದ ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದರ 160 ನೇ ಜಯಂತ್ಯುತ್ಸವದ ಅಂಗವಾಗಿ ರಾಜ್ಯಮಟ್ಟದ ಸದ್ಭಾವನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶೋಭಾ ರಂಗನಾಥ್ ಪ್ರಶಸ್ತಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಶಾಸಕ ಎ.ಎಸ್. ಪಾಟೀಲ್, ಮಾಜಿ ಸಚಿವ ಸಿ.ಎಸ್. ನಾಡಗೌಡ ಅಪ್ಪಾಜಿ, ರಾಜ್ಯ ಎನ್‌ಎಸ್‌ಎಸ್ ಕೋಶಾಧಿಕಾರಿ ಪ್ರತಾಪಲಿಂಗಯ್ಯ, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಒಕ್ಕೂಟ ನವದೆಹಲಿಯ ಅಧ್ಯಕ್ಷ ಜಾವೇದ್ ಜಾಮದಾರ್, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಅಧ್ಯಕ್ಷ ಡಾ.ಎಸ್. ಬಾಲಾಜಿ, ರಾಜ್ಯ ಕಾರ್ಯದರ್ಶಿ ಸುರೇಶ್ ರೈ ಸುಡಿಮುಳ್ಳು, ಮುದ್ದೇಬಿಹಾಳ್ ಪುಂಡಲೀಕ ಮುರಾಳ್, ದಾವಣಗೆರೆ ಜಿಲ್ಲಾಧ್ಯಕ್ಷ ಎನ್.ಕೆ. ಕೊಟ್ರೇಶ್ ಮತ್ತಿತರರು ಭಾಗವಹಿಸಲಿದ್ದಾರೆ.



# ಸಾಮಾಜಿಕ ನ್ಯಾಯ ಕೊಡಿ : ಎಂಎಂಜೆ ಹರ್ಷವರ್ಧನ್



## ಕೊಟ್ಟೂರು

ಕೊಟ್ಟೂರು, ಫೆ 12 - ಹಿಂದುಳಿದ ದಲಿತ ಸಮುದಾಯದವರು ಕ್ಷೇತ್ರದಲ್ಲಿ ಹೆಚ್ಚು ಸಂಖ್ಯೆ ಹೊಂದಿದ್ದು ಆದರೆ ಅಭಿವೃದ್ಧಿ ಮಾತ್ರ ಇಳಿಮುಖವಾಗಿದೆ. ಇದರಿಂದಾಗಿ ಈ ಹಿಂದೆ ಸಂತೋಷ ಲಾಡ್ ಹೇಳಿದಂತೆ ಬಳ್ಳಾರಿ ಜಿಲ್ಲೆಯಲ್ಲೇ ದಲಿತರ ಸಂಖ್ಯೆ ಹೆಚ್ಚು ಇದ್ದು, ಇವರಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಆಗಲಿ ಎಂಬ ಅಭಿಪ್ರಾಯದಂತೆ ವಿಜಯನಗರ ಜಿಲ್ಲೆಯಲ್ಲಿ ಬರುವ ಎರಡು ಎಸ್ಸಿ ಕ್ಷೇತ್ರದಲ್ಲಿ ಎರಡು ಕಡೆ ಲಂಬಾಣಿ ಸಮುದಾಯಕ್ಕೆ ಟಿಕೆಟ್ ನೀಡದೆ ಹಗರಿಬೊಮ್ಮನಹಳ್ಳಿ ಕ್ಷೇತ್ರಕ್ಕೆ ಬೇರೆ ಹಿಂದುಳಿದ ದಲಿತ ಸಮುದಾಯಕ್ಕೆ ಅವಕಾಶ ನೀಡಿ ಸಾಮಾಜಿಕ ನ್ಯಾಯ ಕೊಡಬೇಕು. ಕ್ಷೇತ್ರದಲ್ಲಿ ಆಗುವ ಬದಲಾವಣೆಯನ್ನು ರಾಜ್ಯ ನಾಯಕರು ಪರಿಶೀಲಿಸಿ ಟಿಕೆಟ್ ನೀಡಬೇಕು ಎಂದು ಎಂಎಂಜೆ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಹರ್ಷವರ್ಧನ್ ಅವರು ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಿ.ಬಸವರಾಜ್ ಮಾತನಾಡಿ, ಶಾಸಕರ ಅನುದಾನದಲ್ಲಿ ಬರುವ ಸೌಲಭ್ಯಗಳು ತಮ್ಮ ತಮ್ಮ ಸಂಬಂಧಿಕರಿಗೆ ಕೊಡಿಸುವ ಮೂಲಕ ನಿಜವಾದ ಬಡವರನ್ನು ಸೌಲಭ್ಯ ವಂಚಿತರನ್ನಾಗಿ ಮಾಡಿದ್ದಾರೆ ಎಂದು ಹಗರಿಬೊಮ್ಮನಹಳ್ಳಿ ಶಾಸಕ ಭೀಮನಾಯ್ಕ ವಿರುದ್ಧ ಗುಡುಗಿದರು.

ಪರ್ಸೆಂಟೇಜ್ ನೀಡಿದರೆ ಮಾತ್ರ ಕಾಮಗಾರಿಗೆ ಗುದ್ದಲಿ ಪೂಜೆ ಮಾಡುತ್ತೀನಿ ಎನ್ನುವ ಶಾಸಕರು ಸಾಕು. ಸಾಮಾಜಿಕ ನ್ಯಾಯ ಅಡಿಯಲ್ಲಿ ಟಿಕೆಟ್ ಕೊಡಬೇಕು ಎಂದು ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ದೊಡ್ಡರಾಮಣ್ಣ ಹೇಳಿದರು.

ಬುಡ್ಡಿ ಬಸವರಾಜ್ ಮಾತನಾಡಿ, ಶಾಸಕರು ತಮಗೆ ಬೇಕಾದವರಿಗೆ ಸೂಕ್ತ ಸ್ಥಾನ ಕಲ್ಪಿಸಿಕೊಟ್ಟು ಮೂಲ ಕಾಂಗ್ರೆಸ್ ಕಾರ್ಯಕರ್ತರನ್ನು ಕಡೆಗಣಿಸುತ್ತಿರುವುದು ಈ ವಿರೋಧಿ ಅಲೆಗೆ ಕಾರಣವಾಗಿದೆ ಎಂದರು. ಈ ವಿಷಯವನ್ನು ಈಗಾಗಲೇ ಹೈಕಮಾಂಡ್ ಗಮನಕ್ಕೆ ತಂದಿದ್ದೇವೆ ಎಂದರು. ಅನ್ಯ ಪಕ್ಷದಿಂದ ಬಂದಿರುವ ಭೀಮನಾಯ್ಕ ನಮ್ಮ ಕ್ಷೇತ್ರದವರಲ್ಲ ಹಾಗಾಗಿ ಸ್ಥಳೀಯ ಮುಖಂಡರಿಗೆ ಟಿಕೆಟ್ ನೀಡಿದರೆ ಗೆಲುವು ಸಾಧ್ಯ, ಇಲ್ಲದಿದ್ದರೆ ಪಕ್ಷಕ್ಕೆ ಸೋಲು ಕಟ್ಟಿಟ್ಟ ಬುತ್ತಿ ಎಂದರು.

ಈ ಸಂದರ್ಭದಲ್ಲಿ ಹೆಗ್ಡಾಳ್ ರಾಮಣ್ಣ, ಮುಟಗನಹಳ್ಳಿ ಕೊಟ್ರೇಶ, ಸುಧಾಕರಗೌಡ ಪಾಟೀಲ್, ಕನ್ನಳ್ಳಿ ಕೊಟ್ರೇಶ, ಸೋಮಲಿಂಗಪ್ಪ, ಮಹೇಶ್ ಹಾಗೂ ಹನಸಿ ಕೊಟ್ರೇಶ ಮುಂತಾದವರು ಮಾತನಾಡಿದರು.

# ಇಸ್ರೋದಿಂದ 'ಗಾಲಿಯ ಮೇಲೆ ಅಂತರಿಕ್ಷ' ಜಾಗೃತಿ ಕಾರ್ಯಕ್ರಮ




## ರಾಣೇಬೆನ್ನೂರು

ರಾಣೇಬೆನ್ನೂರು, ಫೆ.12- ವಿಜ್ಞಾನದ ಸಂಗತಿಯನ್ನು ವಿದ್ಯಾರ್ಥಿಗಳು ಅರಿತುಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಇಸ್ರೋ ಸಂಸ್ಥೆಯ ವಿಜ್ಞಾನಿ ಎಚ್.ಎಲ್. ಶ್ರೀನಿವಾಸ ಹೇಳಿದರು.

ನಗರದ ಡೆಲ್ಲಿ ಸೆಂಟ್ರಲ್ ಸ್ಕೂಲ್‌ನಲ್ಲಿ ಬೆಂಗಳೂರಿನ ಇಸ್ರೋ ಸಂಸ್ಥೆಯ ವತಿಯಿಂದ ಸ್ಪೇಸ್ ಆನ್ ವ್ಹೀಲ್ಸ್ (ಗಾಲಿಯ ಮೇಲೆ ಅಂತರಿಕ್ಷ) ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 1963ರಲ್ಲಿ ಆರಂಭವಾದ ಇಸ್ರೋ ಸಂಸ್ಥೆ ಇಲ್ಲಿವರೆಗೂ ಅನೇಕ ಸಾಧನೆಗಳನ್ನು ಮಾಡಿದೆ ಹಾಗೂ ಮುಂದಿನ ದಿನಗಳಲ್ಲಿ ಸಂಸ್ಥೆಯ ವತಿಯಿಂದ ಹಮ್ಮಿಕೊಂಡ ಯೋಜನೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕು ಎಂದರು.

ಆರ್‌ಟಿಇಎಸ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಕೆ.ಟಿ.ಉದಪುಡಿ ಮಾತನಾಡಿ, ಇಸ್ರೋ ಸಂಸ್ಥೆಯಿಂದ ದೇಶದಲ್ಲಿ ಅನೇಕ ಸಾಧನೆಗಳನ್ನು ಮಾಡಲಾಗಿದೆ. ಮೊದಲ ಬಾರಿಗೆ ಉಡಾವಣೆಯಾದ ಆರ್ಯಭಟ ಉಪಗ್ರಹದಿಂದ ಇಲ್ಲಿವರೆಗೂ ಅನೇಕ ಉಪಗ್ರಹ ಉಡಾವಣೆಯಾಗಿದ್ದು, ಅವುಗಳ ಬಗ್ಗೆ ತಿಳಿದುಕೊಳ್ಳಲು ಇದೊಂದು ಅವಕಾಶವಿದೆ ಎಂದರು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ತೊಗಟವೀರ, ಮಂಜುನಾಥ ತೊಗಟವೀರ, ಡಾ.ರಾಜು ಶಿರೂರ, ಶಾಲೆಯ ಪ್ರಾಚಾರ್ಯೆ ಆನಂದಿ ಭಟ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಡು ಬಡವರಿಗೆ ಸೈಕಲ್ ವಿತರಣೆ




ದಾವಣಗೆರೆ, ಫೆ. 12- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಅತ್ಯಂತ ಕಡು ಬಡವರಿಗೆ, ವಿದ್ಯಾರ್ಥಿಗಳಿಗೆ ಮತ್ತು ಕೂಲಿ ಕಾರ್ಮಿಕರಿಗೆ ಹತ್ತು ಸೈಕಲ್‌ಗಳನ್ನು ವಿತರಿಸಲಾಯಿತು. ಸೈಕಲ್‌ಗಳಿಗೆ ಧನ ಸಹಾಯ ನೀಡಿದ ದಾನಿಗಳಾದ ಜಿ.ಪಂ. ನಿವೃತ್ತ ಕಾರ್ಯದರ್ಶಿ ಆರ್.ಆರ್. ಕುಸಗೂರು, ದಂತ ವೈದ್ಯ ಡಾ. ಬಸಪ್ಪ, ಶ್ರೀಮತಿ ವಿಮಲಮ್ಮ ಅತಿಥಿಗಳಾಗಿ ಆಗಮಿಸಿದ್ದರು.

ಟ್ರಸ್ಟಿನ ನಿರ್ದೇಶಕರುಗಳಾದ ಎನ್.ಪಿ. ಜಯಣ್ಣ, ಶ್ರೀಮತಿ ಮಂಜುಳಾ ಬಸವಲಿಂಗಪ್ಪ ಮತ್ತು ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಉಪಸ್ಥಿತರಿದ್ದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಮುಂದಿನ ದಿನಗಳಲ್ಲಿ 200 ಸೈಕಲ್ ಗಳನ್ನು ವಿತರಿಸುವ ಗುರಿ ಹೊಂದಿದ್ದು, ಹೊಸ ಸೈಕಲ್‌ಗೆ 7 ಸಾವಿರ ರೂ. ಮತ್ತು ಹಳೆಯ ಸೈಕಲ್‌ಗೆ 3 ಸಾವಿರ ರೂ. ಧನ ಸಹಾಯ ಮಾಡಿ ಸಹಕರಿಸಬೇಕಾಗಿ ವಿನಂತಿ. ತಮ್ಮಲ್ಲಿ ಉಪಯೋಗಿಸದೆ ಹಾಗೆಯೇ ಉಳಿದಿರುವ ಹಳೆಯ ಸೈಕಲ್ ಗಳನ್ನು ದಾನ ಮಾಡುವ ಮೂಲಕ ಬಡವರ ಜೀವನ ನಿರ್ವಹಣೆಗೆ ಸಹಕರಿಸಬೇಕಾಗಿ ವಿನಂತಿ. ಸಹೃದಯಿ ದಾನಿಗಳು ಸಂಪರ್ಕಿಸಿ : 95380 24422.

# ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯಗಳ ದಿನಾಚರಣೆ



ದಾವಣಗೆರೆ, ಫೆ. 12- ನಗರದ ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯ ನರ್ಸರಿ ವಿಭಾಗದ ಮಕ್ಕಳಿಂದ ಅಂತರರಾಷ್ಟ್ರೀಯ ಸಿರಿಧಾನ್ಯಗಳ ದಿನ ಆಚರಿಸಲಾಯಿತು.

ವಿದ್ಯಾಸಂಸ್ಥೆಯ ಪ್ರಾಂಶುಪಾಲ ಆರ್. ಸಯ್ಯದ್ ಆರಿಫ್, ಶ್ರೀಮತಿ ಪ್ರೀತಾ ಟಿ. ರೈ, ಶ್ರೀಮತಿ ಜ್ಯೋತಿ ಎನ್. ಉಪಾಧ್ಯಾಯ ಅವರು ಮೊಳಕೆ ಕಾಳುಗಳನ್ನು ಮಕ್ಕಳಿಗೆ ತಿನಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿದ್ಯಾರ್ಥಿಗಳು ವಿವಿಧ ಧಾನ್ಯಗಳನ್ನು ತಂದು, ತಮ್ಮ ತೊದಲು ನುಡಿಯ ಮೂಲಕ ಧಾನ್ಯಗಳಲ್ಲಿರುವ ಸಮಗ್ರ ಪೌಷ್ಟಿಕಾಂಶ, ಆರೋಗ್ಯ ರಕ್ಷಣೆಗೆ ಅವಶ್ಯಕವಾದ ಧಾನ್ಯಗಳ ಬಗ್ಗೆ ತಿಳಿಸಿದರು. ವಿದ್ಯಾಸಂಸ್ಥೆಯ ಅಧ್ಯಕ್ಷ ಅನಿಲ್ ಕುಮಾರ್, ಕಾರ್ಯದರ್ಶಿ ಉಮಾಪತಯ್ಯ ಹಾಗೂ ಖಜಾಂಚಿ ಪ್ರವೀಣ್ ಹುಲ್ಲುಮನೆ ಉಪಸ್ಥಿತರಿದ್ದರು.

# ನಾಡಿದ್ದು ಅಕ್ಷರ ದಾಸೋಹ ಬಿಸಿಯೂಟ ತಯಾರಕರಿಂದ ಧರಣಿ

ದಾವಣಗೆರೆ, ಫೆ. 12- ಎಐಟಿಯುಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರು ಇದೇ ದಿನಾಂಕ 15 ರಿಂದ 17ರವರೆಗೆ 3 ದಿನಗಳ ಕಾಲ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಿದ್ದಾರೆ ಎಂದು ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ಇದೇ ಬರುವ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರಿಗೆ ಕನಿಷ್ಟ ವೇತನ ಜಾರಿಗೊಳಿಸಬೇಕು. ಅಪಘಾತ ಮತ್ತು ಮರಣ ಪರಿಹಾರ ಜಾರಿಗೆ ತರಬೇಕು. ಕೆಲಸದ ಭದ್ರತೆ ಒದಗಿಸಬೇಕು. ಯೋಜನೆಯನ್ನು ಖಾಸಗೀಕರಣ ಮಾಡಬಾರದು. ಬಿಸಿಯೂಟ ತಯಾರಕರಿಗೆ ಪೆನ್ಷನ್/ಇಡಗಂಟು ಹಣ ಜಾರಿಗೆ ತರಬೇಕು ಮತ್ತು ಬಿಸಿಯೂಟ ಯೋಜನೆಯನ್ನು ದುರ್ಬಲಗೊಳಿಸುವ ಹುನ್ನಾರವನ್ನು ಕೈಬಿಟ್ಟು ಬಿಸಿಯೂಟ ಯೋಜನೆಯನ್ನು ಮತ್ತಷ್ಟು ಬಲಪಡಿಸಬೇಕು. ಬಿಸಿಯೂಟ ತಯಾರಕರನ್ನು ಯಾವುದೇ ಕಾರಣ ನೀಡಿ ಕೆಲಸದಿಂದ ತೆಗೆಯಬಾರದು ಸೇರಿದಂತೆ ಮತ್ತಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಧರಣಿ ಮಾಡುವ ಮೂಲಕ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಚಂದ್ರು ತಿಳಿಸಿದ್ದಾರೆ.

# ಹಡಗಲಿಯಲ್ಲಿ ಉದ್ಯೋಗ ಮೇಳ, ಆರೋಗ್ಯ ಶಿಬಿರ

ಹೂವಿನಹಡಗಲಿ, ಫೆ. 12- ಮಹಾತ್ಮಗಾಂಧಿ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಟ್ರಸ್ಟ್ ವತಿಯಿಂದ ಮಾರ್ಚ್ 4 ರಂದು ತಾಲ್ಲೂಕು ಕ್ರೀಡಾಂಗಣದಲ್ಲಿ ಬೃಹತ್ ಆರೋಗ್ಯ ಹಾಗೂ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಕೃಷ್ಣ ನಾಯಕ ಹೇಳಿದರು. ಕಾಯಕ ಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, 180ಕ್ಕೂ ಹೆಚ್ಚು ವಿವಿಧ ಕಂಪನಿಗಳು ಆಗಮಿಸಲಿವೆ. ಸ್ಥಳೀಯ ಬ್ಯಾಂಕಿಂಗ್ ವಿಭಾಗ ಐಟಿ ಸಾಫ್ಟ್‌ವೇರ್ ಮತ್ತು ಸೇಲ್ಸ್ ಮಾರ್ಕೆಟಿಂಗ್ ಸ್ಕೂಲ್ ಟೀಚರ್ಸ್ ಕಾಸ್ಮೆಟಿಕ್ಸ್ ಇತರೆ ಅವಕಾಶವಿದ್ದು, ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ಬ್ಯಾಂಕುಗಳಿಂದ ಸಾಲ ಸೌಲಭ್ಯಕ್ಕೆ ಅನುಕೂಲತೆ ಕಲ್ಪಿಸಲಾಗುವುದು. ಹತ್ತನೇ ತರಗತಿ ಪಾಸ್ ಅಥವಾ ಫೇಲ್ ತಾಂತ್ರಿಕ ಅಭ್ಯರ್ಥಿಗಳು ಸಹ ಇದರಲ್ಲಿ ಭಾಗವಹಿಸಬಹುದಾಗಿದೆ. ಈ ಸಂದರ್ಭದಲ್ಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಉಪಸ್ಥಿತರಿದ್ದರು.


**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಫೂಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಿಬೇಕಾದ ಮೊಬೈಲ್ ನಂ.
81056 01900, 63627 53030

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಯುರೋ ಸ್ಕೂಲ್ ಹತ್ತಿರ, 35x60 ಉತ್ತರ-ಪೂರ್ವ ಕಾರ್ನರ್. ಡಾಲರ್ಸ್ ಕಾಲೋನಿಯಲ್ಲಿ 30x45 ಪೂರ್ವ, 30x50 ಉತ್ತರ, ವಿನಾಯಕ ಬಡಾವಣೆ, ಆನಂದ ಅಕಾಡೆಮಿ ಕಾಲೇಜ್ ಹಿಂಭಾಗ. 30x57 ಉತ್ತರ ಎರಡು ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 West, 40x60 East, 40x60 West, 30x50 North, 30x50 West, 40x60 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಆಸ್ತಿ ಮತ್ತು ನೀರಿನ ಕಂದಾಯ**
ಈಗ ಮನೆಯಲ್ಲಿ ಕುಳಿತು ನಿಮ್ಮ ಸೈಟ್, ಮನೆ ಮತ್ತು ವಾಣಿಜ್ಯ ಕಟ್ಟಡಗಳ
Property Tax / Water Tax
ಕಟ್ಟಿ ನಿಮ್ಮ ಮನೆಗೆ ತಲುಪಿಸಲಾಗುವುದು
96118 66449

**WANTED**
Banking Sector tele caller (Female Only)
Qualification : Any Degree.
No. 2257/5 2nd Floor, MCC 'A' Block Beside Togataveera Kalyana Mantapa
81237 63199
Interview time : 11AM

**2 ಬೆಡ್‌ರೂಂ ಮನೆ ಬಾಡಿಗೆಗೆ**
ಡೋ ನಂ. 240/2, 4ನೇ ಮೇನ್, ಪಿ.ಜೆ ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
97429 61169, 81974 00298

**ಸೋಫಾ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಸೈಟುಗಳು ಮಾರಾಟಕ್ಕೆ ಬೇಕಾಗಿವೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ನಿಜಲಿಂಗಪ್ಪ ಬಡಾವಣೆ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ತರಳಬಾಳು ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ಅಳತೆ 40x60, 40x70 ಸೈಜಿನ ಸೈಟುಗಳು ಮಾರಾಟಕ್ಕೆ ಬೇಕಾಗಿವೆ.
ಸಂಪರ್ಕಿಸಿ. 86186 66058

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕುಕ್ ಕಮ್ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ :15000/- ಊಟ, ರೂಂ ಉಚಿತ. 12 ಗಂಟೆ ಕೆಲಸ. ಸಂಪರ್ಕಿಸಿ.
97400 98004, 97400 98047

**EC / ಇಸಿ, E-swathu & Khatha Change Building Licence**
Call :
96118-66449

**ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ.**
P. B. Road ಗೆ ಹತ್ತಿರವಾಗಿ 25x88 ಅಡಿ ಅಳತೆಯ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕೆ ಇದೆ. ಸಂಪರ್ಕಿಸಿ :
Mohan Real Estate Agencies
M : 97424 34049

**ಬೇಕಾಗಿದ್ದಾರೆ**
ಎಂಸಿಸಿ 'ಎ' ಬ್ಲಾಕ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
99729 11344

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ರೋಡ್ 1st ಫ್ಲೋರ್ ಮತ್ತು ಹಿಂಬದಿಯ ಮಳಿಗೆ, ಈಶ್ವರ ರೇಡಿಯೋ & ಟಿವಿ ಎದುರು, ಜಯದೇವ ಸರ್ಕಲ್ ಹತ್ತಿರ D/O No. 407, ಮಳಿಗೆ ವಿಸ್ತೀರ್ಣ 1st ಫ್ಲೋರ್ ವಿಸ್ತೀರ್ಣ 10x100, ಹಿಂಬದಿಯ ಮಳಿಗೆ 10x50.
ಸಂಪರ್ಕಿಸಿ : ಉಲ್ಲಾಸ್
85498 16336

**ಮನೆ ಮಾರಾಟಕ್ಕಿದೆ**
ಎಂ.ಸಿ.ಸಿ. 'ಎ' ಬ್ಲಾಕ್ 8ನೇ ಮೇನ್, 8ನೇ ಕ್ರಾಸ್ ಡೋ. ನಂ. 2326, 44x60 ಪೂರ್ವ ದಿಕ್ಕಿನ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
99801 70398

**ಮನೆ ಲೀಸ್‌ಗೆ ಇದೆ**
1BHK ವಿತ್ ಅಟ್ಯಾಚ್, 2ನೇ ಮಹಡಿ ಮನೆ ಲೀಸ್‌ಗೆ ಇದೆ. ಮನೆ ನಂ. 389/G-54, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ 'ಎ'ಬ್ಲಾಕ್ ದಾವಣಗೆರೆ.
98447 10844, 88843 62134

**ತಕ್ಷಣ ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಕ್ಯಾಪ್ಟನ್, ಕ್ಯಾಷಿಯರ್, ಹಾಗೂ ಸ್ಟೀವರ್ಡ್ (ವೇಟರ್ಸ್) ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ.
88846 30532, 91480 16466
96060 96698

**ಬೇಕಾಗಿದ್ದಾರೆ**
ಆನಗೋಡು ಸಮೀಪ NH48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ.
99001 42052,90082 28222

**WANTED**
* Warden (Preferably Ex-army)
* Physical Education Teacher (MP.Ed.)
* Security Guard (Preferably Ex-army)
ANMOL PUBLIC SCHOOL
CONTACT
96207 68987, 94483 91963

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳಿಯಗಳಿಗೆ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : 63639-54459

**Wanted**
Girls required for data entry and billing work at
Food Mart Supermarket.
Quli : B.Com
Mob : 98864 63531

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
ಫೋ. : 88920 08800

**ಬೇಕಾಗಿದ್ದಾರೆ**
1) ಕ್ಯಾಷಿಯರ್ - ಮಹಿಳೆಯರು (2-3 ವರ್ಷ ಅನುಭವವುಳ್ಳವರು) ಬಿ.ಕಾಂ/ ಎಂ.ಕಾಂ
2) ಸೇಲ್ಸ್ ಬಾಯ್ಸ್ / ಗರ್ಲ್ಸ್ ಅನುಭವವುಳ್ಳವರು
3) ಕ್ಲೀನಿಂಗ್ ಮಾಡಲು ಮಹಿಳೆಯರು
ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು ಸಂಪರ್ಕಿಸಿ
ಶರಭೇಶ್ವರ ಫುಡ್ ಪ್ರಾಡಕ್ಟ್ಸ್ ಮತ್ತು ಹೋಟೆಲ್
94489 80070, 88847 04025

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**ಸೈಟುಗಳು ಮಾರಾಟಕ್ಕಿವೆ**
LIC ಕಾಲೋನಿಯಲ್ಲಿ ವಿವೇಕಾನಂದ ಬಡಾವಣೆಯಲ್ಲಿ 30x43 East, 30x40 West, 30x50 East, 30x60 West, 30x50 corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಕ್ತಿ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಕೊರೆಯುವುದು
300 ರಿಂದ 350 ಅಡಿ, ಬಿಟ್ ಸೈಜ್ 4.5
99640 78484
95906 15776

**ಹೋಟೆಲ್ ಮುರುಳಿ**
ಬಜೆಟ್ ದಮ್ ಬಿರಿಯಾನಿ ಸೆಂಟರ್
* 50 ರೂ. ಗೆ ಚಿಕನ್ ದಮ್ ಬಿರಿಯಾನಿ
* 110 ರೂ. ಗೆ ಮಟನ್ ದಮ್ ಬಿರಿಯಾನಿ
ಸಮಯ : ಮಧ್ಯಾಹ್ನ 12ರಿಂದ 4 ಗಂಟೆ, ಸಂಜೆ 6-30ರಿಂದ 9-30, ಸ್ಥಳ : 2ನೇ ಮೇನ್, 15ನೇ ಕ್ರಾಸ್, ಅಮಿತ್ ಟಾಕೀಸ್ ಕಾಂಪ್ಲೆಕ್ಸ್, ವಿನೋಬನಗರ, ದಾವಣಗೆರೆ. (ಆನ್ ಲೈನ್ ಬುಕ್ಕಿಂಗ್ ಸಹ ಮಾಡಬಹುದು)
95912 76454, 98449 66555

**ತಿಂಗಳ ಬಾಡಿಗೆಗೆ / ಲೀಸ್‌ಗೆ ತಕ್ಷಣ ಬೇಕಾಗಿದೆ**
ಡಿ ಫಾರಂ ಲೈಸೆನ್ಸ್ ಹೊಂದಿರುವವರು ಚಳ್ಳಕೆರೆಯಲ್ಲಿ ಮೆಡಿಕಲ್ಸ್ ಶಾಪ್ ಪ್ರಾರಂಭ ಮಾಡಲಿಕ್ಕೆ ಸರ್ಟಿಫಿಕೇಟ್ ತಕ್ಷಣ ಬೇಕಾಗಿದೆ. ಸಂಪರ್ಕಿಸಿ.
94483 16977, 86607 40866

**ಬೇಕಾಗಿದ್ದಾರೆ**
ಮನೆ ಕೆಲಸ ಮಾಡಲು ಗಂಡ - ಹೆಂಡತಿ ಇಬ್ಬರಿಗೂ ಕೆಲಸ ಸಿಗುತ್ತದೆ. ವಾಸಕ್ಕೆ ಮನೆ ನೀಡಲಾಗುವುದು. ಸಂಪರ್ಕಿಸಿ :
63639-54459

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕೆಲಸ ಮಾಡಲು ಕುಟುಂಬ ಇರುವವರು ಬೇಕಾಗಿದ್ದಾರೆ. ಆಕರ್ಷಕ ವೇತನ ಕೊಡಲಾಗುವುದು.
73535 07622

**ಬೇಕಾಗಿದ್ದಾರೆ**
ಕಾರ್ಯದರ್ಶಿ ಹುದ್ದೆಗೆ ಬೇಕಾಗಿದ್ದಾರೆ. B.Com ಅನುಭವವುಳ್ಳವರು ವೈಶ್ಯ ಸೌಹಾರ್ದ ಕೋ ಆಪ್ ಲಿಮಿಟೆಡ್ ಸಿರಿಗೆರೆ ಹಾಸ್ಟೆಲ್ ಬಿಲ್ಡಿಂಗ್ ನರಸರಾಜ ರಸ್ತೆ, ದಾವಣಗೆರೆ-01.
ಮೊ : 78923 94568

**ಕೆಲಸಕ್ಕೆ ಬೇಕಾಗಿದ್ದಾರೆ**
V-MAX Elevator
ITI (Welder), BE (Mech) & (Electrical) Diploma (Mech) (E&E) (E&C)
Job Location : (MBA) in Marketing Davanagere, Manglore, Shivamogga, Hubli.
99459 34405 , 78991 34005

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
8749098879

**WANTED FOR RECEPTIONIST**
Age 21 - 27,
Address : Hairpoint Unisex salon 2nd Floor, No 2988-2A,2B. 7th Main, 3rd Cross Rd, MCC 'B' Block, Davanagere. Karnataka 577004.
Contact no.
97386 64400, 91483 19342

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ತಕ್ಷಣ ಬೇಕಾಗಿದ್ದಾರೆ ತಮ್ಮ ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ. ಶಾಪ್ ಕ್ಲೀನಿಂಗ್ ಸಂಪರ್ಕಿಸಿ.
63631 97523

**ತಕ್ಷಣ ಬೇಕಾಗಿದ್ದಾರೆ**
ಕಚೇರಿಯಲ್ಲಿ ಕಂಪ್ಯೂಟರ್ ಕೆಲಸ ಮಾಡಲು ಡಿಸೈನರ್ಸ್, ಟೈಪಿಂಗ್, ಅನುಭವವಿರುವ ಪುರುಷರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು. ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 5 ರವರೆಗೆ ಬಿಜೆಪಿ ಕಚೇರಿ , ನಿಜಲಿಂಗಪ್ಪ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.
73535 07622

**Commercial Site for Sale**
B.I.E.T. Road, corner site, opposite Hemavathi Hostel, total measurement 3200/sq. Feets
Mohan Real Estate Agencies
97424 34049

**ವ್ಯಾಪಾರ ಸಾಲ, ಆಸ್ತಿ ಸಾಲ**
ಮನೆ ಕಟ್ಟಲು ಮತ್ತು ಖರೀದಿಸಲು ಸಾಲ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಫೋ. : 74835 24662

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು, 1. ಕ್ಯಾಷಿಯರ್ 2. ಕ್ಯಾಪ್ಟನ್ ಹಾಗೂ ಸ್ಟೀವರ್ಡ್ (ವೇಟರ್ಸ್) ಕೆಲಸಗಾರರು ಬೇಕಾಗಿದ್ದಾರೆ. ತಮ್ಮ ಬಯೋ ಡೇಟಾದೊಂದಿಗೆ ಸಂಪರ್ಕಿಸಿ.
96060 96695

**WE ARE HIRING**
Teachers for CBSE school.
(All Subjects), Nursery to 10th
Qualification : B.Sc. B.Ed., M.Sc. B.Ed., BA. B.Ed
Salary: 25000-30000
Padmadeepa Residential School, DB Halli, Bhadravathi, Thaluku.
Send ur Resume to padmadeepapublicschool@gmail.com
Contact: 9164342779

**WANTED**
Civil Engineers Only for Ladies
Contact :
Ph. : 80880 50729
74060 21863

# ಅಥಣಿ ಶಾಲೆ : 'ಸ್ವಪ್ನ-4 ಚಿಣ್ಣರ ಕನಸು' ಮಾರುಕಟ್ಟೆಯಾದ ಶಾಲಾ ಆವರಣ

ದಾವಣಗೆರೆ, ಫೆ.12- ನಗರದ ಜಿ.ಎಂ. ನರ್ಸರಿ, ಪಿ.ಇ.ಎಸ್ ಹೈಯರ್ ಪ್ರೈಮರಿ ಸ್ಕೂಲ್ ಹಾಗೂ ಅಥಣಿ ಪ್ರೌಢಶಾಲೆ ವತಿಯಿಂದ 'ಸ್ವಪ್ನ-4 ಚಿಣ್ಣರ ಕನಸು' ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ನ ಮ್ಯಾನೇಜಿಂಗ್ ಟ್ರಸ್ಟಿ ಎಸ್. ಅಥಣಿ ವೀರಣ್ಣ, ಪಿ.ಇ.ಎಸ್ ಹೈಯರ್ ಪ್ರೈಮರಿ ಸ್ಕೂಲ್‌ನ ಛೇರ್ಮನ್ ಆರ್ ವೆಂಕಟರೆಡ್ಡಿ, ಟ್ರಸ್ಟಿ ಸುಗಂಧರಾಜ್, ಎಸ್.ಬಿ.ಸಿ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ, ಪಿ.ಜೆ. ಕ್ಲಸ್ಟರ್‌ನ ಸಿ.ಆರ್.ಪಿ. ಶ್ರೀಮತಿ ಹೇಮಲತಾ ಮತ್ತು ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ದಿತ ಡಿ ಮೆನನ್ ಆಗಮಿಸಿದ್ದರು.

ಶಾಲಾ ಮಕ್ಕಳಿಂದ ಬಗೆ ಬಗೆಯ ತಿನಿಸುಗಳ ಖಾದ್ಯ ಮೇಳ, ಜನಪದ ಲೋಕ, ಮೆಹಂದಿ, ವಿವಿಧ ಬಗೆಯ ಆಟಗಳು ಮುಂತಾದ ಹಲವು ವೈವಿಧ್ಯಮಯ ಮಳಿಗೆಗಳನ್ನು ಆಯೋಜಿಸಲಾಗಿತ್ತು.

ಶಾಲೆಯಲ್ಲಿನ ಒಟ್ಟು 500 ವಿದ್ಯಾರ್ಥಿಗಳು ಈ ಮೇಳದಲ್ಲಿ ಉತ್ಸಾಹದಿಂದ ಭಾಗವಹಿಸಿ, ಗ್ರಾಮೀಣ ಸಂಸ್ಕೃತಿಯನ್ನು ಪರಿಚಯಿಸುವಂತಹ ಕಾರ್ಯದಲ್ಲಿ ತೊಡಗಿದ್ದರು. ಇವರಿಗೆ ಬೆಂಬಲವಾಗಿ ನಿಂತವರು ಶಾಲಾ ಶಿಕ್ಷಕರು ಹಾಗೂ ಇದರಿಂದ ಶಾಲಾ ಆವರಣದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು. ಒಂದೆಡೆ ಮಕ್ಕಳ ಪ್ರೀತಿಗೆ ಪಾತ್ರವಾದ ಪಾನಿಪೂರಿ, ಆಲೂ ಬೋಂಡಾ, ಬ್ರೆಡ್ ಬೋಂಡಾ, ಜಾಮೂನ್, ಕಾಯಿ ಹೋಳಿಗೆ, ಅವಲಕ್ಕಿ, ಚುರುಮುರಿ, ಗೋಬಿ ಮಂಚೂರಿ, ಸಮೋಸ, ಫ್ರೂಟ್ ಸಲಾಡ್ ಇನ್ನೂ ಮುಂತಾದ ತಿನಿಸುಗಳ ವ್ಯಾಪಾರ ಜೋರಾಗಿತ್ತು.

ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ವ್ಯಾಪಾರದಲ್ಲಿ ತೊಡಗಿದ್ದರೆ ಪೋಷಕರು ಹಾಗೂ ಕೆಲ ವಿದ್ಯಾರ್ಥಿಗಳು ಟೋಕನ್ ತೆಗೆದುಕೊಳ್ಳಲು ಮುಗಿ ಬಿದ್ದಿದ್ದರು. ಒಟ್ಟಿನಲ್ಲಿ ಸಂಪೂರ್ಣವಾಗಿ ಮಾರುಕಟ್ಟೆಯ ವಾತಾವರಣ ಕಂಡು ಬಂದಿತು. ವಿದ್ಯಾರ್ಥಿಗಳಿಗೆ ಮಾರುಕಟ್ಟೆ ವಸ್ತುಗಳ ಬಗ್ಗೆ ತಿಳುವಳಿಕೆ, ವ್ಯಾಪಾರದಲ್ಲಿ ಲಾಭ, ನಷ್ಟ ಇತ್ಯಾದಿ ವಿಷಯಗಳ ಬಗ್ಗೆ ಪ್ರಾಯೋಗಿಕ ಜ್ಞಾನ ನೀಡಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಎಂದು ಮುಖ್ಯೋಪಾಧ್ಯಾಯಿನಿ ಶ್ರೀಮತಿ ದಿತ ಡಿ ಮೆನನ್ ತಿಳಿಸಿದರು.



## ಕದರಮಂಡಲಗಿ : ಇಂದು ರಥೋತ್ಸವ



ಬ್ಯಾಡಗಿ ತಾಲ್ಲೂಕಿನ ಮಹಾಕ್ಷೇತ್ರ ಕದರ ಮಂಡಲಗಿಯಲ್ಲಿ ಶ್ರೀ ಆಂಜನೇಯ ಸ್ವಾಮಿ (ಕಾಂತೇಶ)ಯ ಮಹಾರಥಾ ರೋಹಣದ ಪ್ರಯುಕ್ತ ಇಂದು ಮಹಾರಥೋತ್ಸವದ ನಂತರ ಓಕುಳಿ ಜರುಗಲಿದೆ.

## ಚುನಾವಣಾ ಪ್ರಭಾರಿಯಾಗಿ ವೀರೇಶ್



ದಾವಣಗೆರೆ, ಫೆ.12- ಜಿಲ್ಲಾ ಬಿಜೆಪಿ ಖಜಾಂಚಿ ಬಾತಿ ವೀರೇಶ್ ಅವರನ್ನು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಭಾರಿನ್ನಾಗಿ ನೇಮಕ ಮಾಡಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆದೇಶ ಹೊರಡಿಸಿದ್ದಾರೆ.

# ರಾಕೆಟ್ ವಲಯದಿಂದ ಓಜೋನ್ ಹಾನಿ

ಕ್ರೈಸ್ಟ್‌ಚರ್ಚ್, ಫೆ. 12 – ನಾಲ್ಕು ದಶಕಗಳ ಪ್ರಯತ್ನದ ನಂತರ ಓಜೋನ್ ಪದರಕ್ಕೆ ಆಗಿದ್ದ ಹಾನಿ ನಿವಾರಣೆಯಾಗುತ್ತಿದೆ. ಆದರೆ, ಕ್ಷಿಪ್ರವಾಗಿ ಬೆಳೆಯುತ್ತಿರುವ ರಾಕೆಟ್ ಉದ್ಯಮದಿಂದ ಓಜೋನ್‌ಗೆ ಮತ್ತೆ ಅಪಾಯ ಎದುರಾಗಿದೆ.

ಓಜೋನ್ ಪದರದಿಂದಾಗಿ ಸೂರ್ಯನಿಂದ ಬರುವ ಹಾನಿಕಾರಕ ಅಲ್ಟ್ರಾವೈಲೆಟ್ ಕಿರಣಗಳಿಗೆ ತಡೆಯಾಗುತ್ತದೆ. 1985ರಲ್ಲಿ ಅಂಟಾರ್ಟಿಕಾದಲ್ಲಿ ಬೃಹತ್ ಓಜೋನ್ ರಂಧ್ರ ಪತ್ತೆಯಾಗಿದ್ದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು.

ನಂತರ ದಶಕಗಳ ಕಾಲ ಸಂಯೋಜಿತ ಜಾಗತಿಕ ಪ್ರಯತ್ನದಿಂದ ಈ ಅಪಾಯ ತಪ್ಪಿಸಲಾಗಿತ್ತು. ಫ್ರಿಜ್ ಹಾಗೂ ಏರೋಸೋಲ್‌ಗಳಲ್ಲಿ ಬಳಕೆಯಾಗುವ ಸಿ.ಎಫ್.ಸಿ. ರಾಸಾಯನಿಕಗಳೇ ಓಜೋನ್‌ಗೆ ಪ್ರಮುಖ ಹಾನಿ ತರುತ್ತಿದ್ದವು. ಈ ರಾಸಾಯನಿಕದ ಬಳಕೆ ಮೇಲೆ ತೀವ್ರ ಕಡಿವಾಣ ಹಾಕಲಾಯಿತು.

ಆದರೆ, ಜಾಗತಿಕವಾಗಿ ರಾಕೆಟ್ ಉದ್ಯಮ ವೇಗವಾಗಿ ಬೆಳೆಯುತ್ತಿದೆ. ವಾರ್ಷಿಕವಾಗಿ ಉಡಾವಣೆಯಾಗುವ ರಾಕೆಟ್‌ಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಇದರಿಂದ ಹೊರ ಹೊಮ್ಮುವ ಅನಿಲಗಳಿಂದಾಗಿ ಓಜೋನ್ ಪದರದ ಚೇತರಿಕೆಗೆ ಅಡ್ಡಿಯಾಗಲಿದೆ.

ರಾಕೆಟ್‌ಗಳಿಗೆ ಬಳಸುವ ಇಂಧನದ ಮೇಲೆ



ಪ್ರಸಕ್ತ ಯಾವುದೇ ನಿರ್ಬಂಧ ಇಲ್ಲ. ಇವುಗಳಲ್ಲಿ ಬಳಕೆಯಾಗುವ ರಾಸಾಯನಿಕಗಳು ಓಜೋನ್‌ಗೆ ಹಾನಿ ಮಾಡುತ್ತವೆ ಎಂದು ಗುರುತಿಸಲಾಗಿದೆ.

ರಾಕೆಟ್‌ಗಳ ತ್ಯಾಜ್ಯ ಗಗನದ ಮಟ್ಟದಲ್ಲಿ ಹರಡುತ್ತದೆ. ಹೀಗಾಗಿ ಅವುಗಳಿಂದ ಓಜೋನ್ ಪದರಗಳಿಗೆ ಆಗುವ ಹಾನಿ ಹೆಚ್ಚಾಗಿದೆ.

ಇತ್ತೀಚೆಗೆ ರಾಕೆಟ್‌ಗಳಲ್ಲಿ ಮಿಥೇನ್ ಅನ್ನು ಇಂಧನವಾಗಿ ಬಳಸಲಾಗುತ್ತಿದೆ. ಇದರಿಂದ ಓಜೋನ್ ಪದರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಇನ್ನೂ ಸ್ಪಷ್ಟ ಚಿತ್ರಣ ದೊರೆತಿಲ್ಲ.

ಸಿ.ಎಫ್.ಸಿ.ಯಲ್ಲಿ ಕ್ಲೋರೀನ್ ಇದೆ ಎಂಬ ಕಾರಣಕ್ಕಾಗಿ ನಿಷೇಧ ಹೇರಲಾಗಿತ್ತು. ಆದರೆ, ಹಲವಾರು ರಾಕೆಟ್‌ಗಳು ಕ್ಲೋರಿನ್ ಬಳಕೆ ಮಾಡುತ್ತಿವೆ.

ಇಲ್ಲಿಯವರೆಗೂ ರಾಕೆಟ್ ಉಡಾವಣೆಗಳ ಪ್ರಮಾಣ ಕಡಿಮೆ ಇದ್ದ ಕಾರಣಕ್ಕೆ ಓಜೋನ್ ಮೇಲೆ ಹೆಚ್ಚು ಪರಿಣಾಮ ಆಗಿರಲಿಲ್ಲ. ಆದರೆ, ರಾಕೆಟ್ ವಲಯ ವೇಗದ ಬೆಳವಣಿಗೆ ಕಾಣುತ್ತಿದೆ. 2040ರ ವೇಳೆಗೆ ಈ ವಲಯ 3.7 ಟ್ರಿಲಿಯನ್ ಡಾಲರ್ ಗಾತ್ರಕ್ಕೆ ಬೆಳೆಯಲಿದೆ.

ಈ ಹಿನ್ನೆಲೆಯಲ್ಲಿ, ರಾಕೆಟ್ ತಂತ್ರಜ್ಞಾನವನ್ನು ಓಜೋನ್ ಸ್ನೇಹಿ ಮಾಡಲು ವಿಜ್ಞಾನಿಗಳು ಸಂಶೋಧನೆ ನಡೆಸುವ ಜೊತೆಗೆ, ಸರ್ಕಾರಿ ಸಂಸ್ಥೆಗಳು ಹೆಚ್ಚಿನ ಕಾಳಜಿ ತೋರಬೇಕಿದೆ. ಯಾವ ರಾಕೆಟ್ ಮಾದರಿ ಹೆಚ್ಚು ಓಜೋನ್ ನಷ್ಟಕ್ಕೆ ಕಾರಣವಾಗುತ್ತದೆ ಎಂಬ ಬಗ್ಗೆ ವ್ಯಾಪಕವಾಗಿ ಮಾಹಿತಿ ಹಂಚಿಕೊಳ್ಳಬೇಕಿದೆ.

ಬಾಹ್ಯಾಕಾಶ ವಲಯ ಹಾಗೂ ಓಜೋನ್ ಸಂಶೋಧನಾ ಸಮುದಾಯಗಳ ನಡುವೆ ಮಾಹಿತಿ ವಿನಿಮಯ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಿದೆ. ಉಭಯರು ಜೊತೆಯಾಗಿ ಸೂಕ್ತ ನಿಯಂತ್ರಣ ವ್ಯವಸ್ಥೆ ರೂಪಿಸಬೇಕಿದೆ.

ಬಾಹ್ಯಾಕಾಶ ವಲಯದ ಕಂಪನಿಗಳು, ವಿಜ್ಞಾನಿಗಳು ಹಾಗೂ ಸರ್ಕಾರಗಳ ಸಮನ್ವಯದಿಂದ ಮಾತ್ರ ಸುಸ್ಥಿರ ಜಾಗತಿಕ ರಾಕೆಟ್ ಉಡಾವಣೆ ಸಾಧ್ಯ ವಾಗಲಿದೆ. ಈ ಕುರಿತ ಪ್ರಯತ್ನಗಳು ತಕ್ಷಣದಿಂದಲೇ ಆರಂಭವಾಗಬೇಕಿದೆ ಎಂದು ಪರಿಸರ ವಲಯದ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

# ಬೀಜೋತ್ಪಾದನೆಗೆ ಹೆಚ್ಚಿನ ಗಮನ ಕೊಡಲು ಬೇಸಾಯ ತಜ್ಞ ಮಲ್ಲಿಕಾರ್ಜುನ್ ಸಲಹೆ



ಜಗಳೂರು, ಫೆ.12- ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ಇವರ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯ ಗುಚ್ಛ ಗ್ರಾಮಗಳ ಮುಂಚೂಣಿ ಪ್ರಾತ್ಯಕ್ಷಿಕೆಯ ಕಡಲೆ ಬೆಳೆಯ ಕ್ಷೇತ್ರೋತ್ಸವ ಆಚರಿಸಲಾಯಿತು.

ಕೇಂದ್ರದ ಬೇಸಾಯ ತಜ್ಞರಾದ ಬಿ.ಓ. ಮಲ್ಲಿಕಾರ್ಜುನ್ ಮಾತನಾಡುತ್ತಾ, ಸರಿಯಾದ ಸಮಯಕ್ಕೆ ಸರಿಯಾದ ತಂತ್ರಜ್ಞಾನದ ಬಳಕೆಯಿಂದ ಕಡಲೆ ಬೆಳೆಯಲ್ಲಿ ಉತ್ತಮ ಇಳುವರಿಯನ್ನು ಕಾಣಬಹುದು. ಬೀಜೋತ್ಪಾದನೆಗೆ ಹೆಚ್ಚಿನ ಗಮನ ಕೊಡುವಂತೆ ರೈತರಿಗೆ ಸಲಹೆ ನೀಡಿದರು.

ಕಡಲೆ ಬೆಳೆಯು ಶೇಕಡ 50ರಷ್ಟು ಹೂವಾಡುವ ಸಂದರ್ಭದಲ್ಲಿ ಚಿಕ್ ಪಿ ಮ್ಯಾಜಿಕ್ ಸಿಂಪರಣೆಯಿಂದ ಕಾಯಿಗಳ ಗಾತ್ರ ಹೆಚ್ಚಾಗಲಿದ್ದು, ಮೋಹಕ ಬಲೆಗಳ ಅಳವಡಿಕೆಯಿಂದ ಸಿಂಪರಣೆಯ ಖರ್ಚು ಕಡಿಮೆಯಾಗಿದೆ ಎಂದು ಪ್ರಗತಿಪರ ರೈತರಾದ ಸೋಮನಗೌಡ ಅಭಿಪ್ರಾಯಪಟ್ಟರು.

ಸಸ್ಯ ಸಂರಕ್ಷಣಾ ತಜ್ಞರಾದ ಡಾ. ಟಿ.ಜಿ. ಅವಿನಾಶ್ ಮಾತನಾಡಿ, ಕಾಯಿ ಕೊರಕದ ನಿರ್ವಹಣೆಗಾಗಿ em-macatin ಬೆಂಜೋಟೆ @ 0.5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಣೆ ಮಾಡಬೇಕು ಎಂದರು

ಕಾರ್ಯಕ್ರಮದಲ್ಲಿ ವಿಸ್ತರಣೆ ತಜ್ಞರಾದ ರಘುರಾಜ, ಪ್ರಗತಿಪರ ರೈತರಾದ ಸೋಮಣ್ಣಗೌಡ, ಮಂಜುನಾಥ್, ನಾಗರಾಜ್ ಇತರರು ಭಾಗವಹಿಸಿದ್ದರು.

# ನಿವೃತ್ತ ನೌಕರರಿಂದ ರಾಜ್ಯೋತ್ಸವ



ದಾವಣಗೆರೆ, ಫೆ. 12- ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದಲ್ಲಿ ಏರ್ಪಾಡಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಎ. ಆರ್. ಉಜ್ಜನಪ್ಪ ಧ್ವಜಾರೋಹಣ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಮಾತನಾಡಿ, ರಾಷ್ಟ್ರ ಧ್ವಜ, ಸಂವಿಧಾನ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಕುರಿತು ವಿವರವಾಗಿ ತಿಳಿಸಿದರು. ಉಪಾಧ್ಯಕ್ಷ ವೀರಯ್ಯ, ರಾಜ್ಯ ಸಂಘದ ವಿಭಾಗೀಯ ಉಪಾಧ್ಯಕ್ಷ ಎಸ್. ಗುರುಮೂರ್ತಿ ಉಪಸ್ಥಿತರಿದ್ದರು. ಎಸ್. ಎಂ. ವೀರಯ್ಯ ಸ್ವಾಗತಿಸಿದರು. ಸಿ.ಜಿ. ಕಲ್ಲಪ್ಪ ನಿರೂಪಿಸಿದರು. ಶಿವಲಿಂಗಪ್ಪ ಪ್ರಾರ್ಥಿಸಿದರು. ಬಿ.ಕೆ. ರೇಣುಕಾಮೂರ್ತಿ ವಂದಿಸಿದರು.

# ಜಿಗಳಿ : ಸಂಭ್ರಮದ ಗಣರಾಜ್ಯೋತ್ಸವ



ಮಲೇಬೆನ್ನೂರು, ಫೆ.12- ಜಿಗಳಿ ಗ್ರಾಮದ ಗ್ರಾ.ಪಂ. ಕಛೇರಿ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಗ್ರಾ.ಪಂ. ಕಛೇರಿ ಆವರಣದಲ್ಲಿ ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ವಿನೋದ ಜಿ.ಆರ್. ಹಾಲೇಶ್‌ಕುಮಾರ್ ಮತ್ತು ಸ.ಹಿ.ಪ್ರಾ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷ ಎಂ.ಆರ್ ನಾಗರಾಜ್ ಧ್ವಜಾರೋಹಣ ಮಾಡಿ ವಂದನೆ ಸ್ವೀಕರಿಸಿದರು.

ಗ್ರಾ.ಪಂ. ಉಪಾಧ್ಯಕ್ಷ ಕೆ.ಜಿ. ಮಹಾಂತೇಶ್ ಸದಸ್ಯರಾದ ಡಿ.ಎಂ ಹರೀಶ್, ಕೆ.ಜಿ. ಬಸವರಾಜ್, ಆನಂದಗೌಡ, ದೇವರಾಜ್, ಶ್ರೀಮತಿ ಕರಿಯಮ್ಮ ಶ್ರೀಮತಿ ಮಂಜುಳಾ ಪರಮೇಶ್ವರಪ್ಪ, ಗ್ರಾ.ಪಂ ಮಾಜಿ ಅಧ್ಯಕ್ಷರಾದ ಬಿ.ಎಂ ದೇವೇಂದ್ರಪ್ಪ, ಎಂ.ವಿ ನಾಗರಾಜ್, ಡಿ.ಸಿ.ಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಗ್ರಾಮದ ಮುಖಂಡರಾದ ಜಿ.ಎಂ ಆನಂದಪ್ಪ, ಬಿಳಸನೂರು ಚಂದ್ರಪ್ಪ, ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷರಾದ ಲಕ್ಕೆಗೊಂದಿ ರುದ್ರಗೌಡ, ಡಾ. ನಾಗರಾಜ್, ಜಿ.ಪಿ. ಹನುಮಗೌಡ, ಜಿ.ಆರ್. ಚಂದ್ರಪ್ಪ, ಎಸ್.ಡಿ.ಎಂ.ಸಿ. ಉಪಾಧ್ಯಕ್ಷೆ ಶ್ರೀಮತಿ ಸುನಿತಾ ನಾಗರಾಜ್, ಪತ್ರಕರ್ತ ಪ್ರಕಾಶ್, ಪಿಡಿಓ ಉಮೇಶ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸುಧಾ, ಶಿಕ್ಷಕರಾದ ನಾಗೇಶ್, ಗುಡ್ಡಪ್ಪ, ಮಲ್ಲಿಕಾರ್ಜುನ, ಲಿಂಗರಾಜ್, ಲೋಕೇಶ್, ಕುಸುಮ, ದೀಪಾ, ವೀಣಾ, ಗ್ರಾ.ಪಂ ನ ಬಿ.ಮೌನೇಶ್, ಬಸವರಾಜಯ್ಯ ಮತ್ತು ಇತರರು ಭಾಗವಹಿಸಿದ್ದರು.

## ಮಕ್ಕಳ ಸಾಹಿತ್ಯ ಪರಿಷತ್ ಪದಾಧಿಕಾರಿಗಳ ಪದಗ್ರಹಣ

**ನಗರದಲ್ಲಿ ಇಂದು**

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದಾವಣಗೆರೆ ದಕ್ಷಿಣ ವಿಭಾಗದ ಪದಗ್ರಹಣ ಸಮಾರಂಭವು ಮಾಗನೂರು ಬಸಪ್ಪ ರೋಟರಿ ಬಾಲಭವನದಲ್ಲಿ ಇಂದು ಬೆಳಿಗ್ಗೆ 11.15 ಕ್ಕೆ ನಡೆಯಲಿದೆ.

ಎಕೆ ಫೌಂಡೇಷನ್ ಅಧ್ಯಕ್ಷ ಕೆ.ಬಿ. ಕೊಟ್ರೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಡಿ. ಫ್ರಾನ್ಸಿಸ್ ಕ್ಸೇವಿಯರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಿವಿ, ಮೂಗು, ಗಂಟಲು ತಜ್ಞ ಡಾ. ಎ.ಎಂ. ಶಿವಕುಮಾರ್, ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದಾವಣಗೆರೆ ದಕ್ಷಿಣ ವಿಭಾಗದ ನಿಯೋಜಿತ ಅಧ್ಯಕ್ಷ ಎ.ಜೆ. ರವಿಕುಮಾರ್ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಬಿ.ಎಂ. ದಾರುಕೇಶ್, ಎಂ. ಪೂರ್ಣಿಮಾ, ಹನುಮಂತಪ್ಪ ಶಿರೇಹಳ್ಳಿ, ಎಂ.ಜಿ. ಶಶಿಕಲಾ ಮೂರ್ತಿ, ಲಿಂಗನಗೌಡ ನೆಗಳೂರು, ರಾಜ ಶೇಖರ್ ಗುಂಡಗಟ್ಟಿ, ಸಿ.ಕೆ. ಸಿದ್ದಪ್ಪ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕಾರ್ತಿಕ್ ಪಟೇಲ್ ಜಿ.ಎಸ್., ಕು. ಸಹನಾ ಹೆಚ್., ದರ್ಶನ್ ಆರ್., ಕು. ನಿಶ್ಚಿಂತಾ ಎಸ್.ಎಸ್. ಅವರಿಗೆ ಸನ್ಮಾನಿಸಲಾಗುವುದು.

## ಹಡಗಲಿ : ಸಾಫ್ಟ್‌ವೇರ್ ಉದ್ಯೋಗಿಯ ಸಾಹಿತ್ಯ ಹಂಬಲಕ್ಕೆ ಪ್ರಶಂಸೆ

ಹೂವಿನಹಡಗಲಿ, ಫೆ. 12- ಪಟ್ಟಣದ ಗವಿಸಿದ್ದೇಶ್ವರ ಮಠದಲ್ಲಿ ನಡೆ ಯುತ್ತಿರುವ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧರ್ಮ ಸಭೆಯಲ್ಲಿ ಪಟ್ಟಣದ ಉದ್ಯೋಗ ಕವಿ, ಸಾಹಿತಿ ಚೇತನ್ ನವಲೆ ಇವರ ಭವ್ಯ ಚೇತನ ಕವನ ಸಂಕಲನವನ್ನು ಇಸ್ರೋ ವಿಜ್ಞಾನಿ ಶ್ರೀನಾಥ್ ರತ್ನಾಕರ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಅವರು, ಸಾಫ್ಟ್‌ವೇರ್ ಉದ್ಯೋಗಿಯಾಗಿಯೂ ಸಾಹಿತ್ಯದ ಹಂಬಲವನ್ನು ಅಳವಡಿಸಿ ಕೊಂಡಿರುವ ಚೇತನ್ ಇನ್ನೂ ಉತ್ತಮವಾದ ಕೃತಿಗಳನ್ನು ಹೊರ ತರಲಿ ಎಂದು ಹೇಳಿದರು.

ಗವಿಮಠದ ಡಾ. ಹಿರಿ ಶಾಂತವೀರ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಉಪನ್ಯಾಸಕ ಚಂದ್ರಶೇಖರ್ ಹಾಗೂ ಸುಭಾಷ್ ನವಲೆ, ರೇಣುಕಾ ನವಲೆ ಉಪಸ್ಥಿತರಿದ್ದರು.

## ಜಿಲ್ಲಾ ಟೈಲರ್ಸ್ ಕಲ್ಯಾಣ ಮಂಡಳಿ ಜಾರಿಗಾಗಿ ಆಗ್ರಹಿಸಿ ಇಂದು ಪ್ರತಿಭಟನೆ

ಟೈಲರ್ಸ್ ಮತ್ತು ಸಹಾಯಕರ ಫೆಡರೇಷನ್ ವತಿಯಿಂದ ಟೈಲರ್‌ಗಳಿಗೆ ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ಇಂದು ಪ್ರತಿಭಟನೆ ನಡೆಸಲಾಗುವುದು.

ಬೆಳಿಗ್ಗೆ 11 ಗಂಟೆಗೆ ಜಯದೇವ ಸರ್ಕಲ್ ಬಳಿ ಜಮಾಗೊಂಡು ಅಲ್ಲಿಂದ ಪ್ರತಿಭಟನಾ ಮೆರವಣಿಗೆಯೊಂದಿಗೆ ಎಸಿ ಕಛೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು.

ಜಿಲ್ಲೆಯ ಮಹಿಳಾ ಟೈಲರ್‌ಗಳು ಮತ್ತು ಪುರುಷ ಟೈಲರ್‌ಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕೆಂದು ಸಂಘಟನೆ ಕರೆ ನೀಡಿದೆ.

### ಓದುಗರ ಪತ್ರ

## ಯುಜಿಡಿ ಕೆಲಸದಡಿಯಲ್ಲಿ ಆದ ಮಳೆ ನೀರಿನ ಕಾಲುವೆ



ಮಾನ್ಯರೇ,

ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯ 1ನೇ ಮುಖ್ಯರಸ್ತೆಯಲ್ಲಿ ಆದ ಸ್ಮಾರ್ಟ್ ಸಿಟಿ ಯುಜಿಡಿ ಕೆಲಸದಡಿಯಲ್ಲಿ ಆದ ಮಳೆನೀರಿನ ಕಾಲುವೆ ಇದು. ಆದರೆ ಇದರಲ್ಲಿ ಹೀಗೆ ಕೊಚ್ಚೆ ಹರಿಯುತ್ತಿದೆ.

ಸದ್ಯದಲ್ಲೇ ಕಾಂಕ್ರೀಟ್ ಬ್ಲಾಕುಗಳನ್ನು ಹಾಕಿ ಮುಚ್ಚುವ ಈ ಕಾಲುವೆಯಲ್ಲಿ ಹರಿಯುವ ಕೊಚ್ಚೆಯು ಯಾರ ಕಣ್ಣಿಗೂ ಬೀಳದೆ ಕಾಲಾಂತರ ದಲ್ಲಿ ಸೋ ರಿಕೆಯಾಗಿ ಅಂತರ್ಜಲ ವನ್ನು ಸೇರಿ ವಿಷಮಯಗೊಳಿಸುತ್ತದೆ.

ಇದೇ ರಸ್ತೆಯಲ್ಲಿ ಪ್ರಧಾನಿಗಳ 'ಸ್ವಚ್ಛ ಭಾರತ' ಆಂದೋಲನಕ್ಕೆ ಬೆಂಬಲ ನೀಡಬೇಕಾಗಿರುವ ಬಿಜೆಪಿ ಪಕ್ಷದ ಕಾರ್ಪೊರೇಟರ್ ಇದ್ದಾರೆ. ಮತ್ತು ಇದೇ ರಸ್ತೆಯಲ್ಲಿಯೇ ಕಾಂಗ್ರೆಸ್ ಪಕ್ಷದ ಜಿಲ್ಲಾ ಕಾರ್ಯಾಲಯವೂ ಇದೆ. ಆಡಳಿತ ಮತ್ತು ವಿರೋಧ ಎರಡೂ ಪಕ್ಷದವರ ಬುಡದಲ್ಲೇ ಇಂತಹ ಪರಿಸರ ಮಾರಕ, ಭ್ರಷ್ಟ ಆಡಳಿತಶಾಹಿ ತಪ್ಪುಗಳು ನಡೆದರೂ ಕಾಣದ ಈ ಎರಡೂ ಪಕ್ಷಗಳು ಇನ್ಯಾವ ಕಾರಣಗಳನ್ನಿಟ್ಟುಕೊಂಡು ಜನಪರ ಹೋರಾಟಗಳನ್ನು ನಡೆಸುವರೋ?

ಇದು ಕೇವಲ 'ಸ್ಮಾರ್ಟ್ ಸಿಟಿ' ಅಡಿಯಲ್ಲಿ ಬರುವ ಒಂದು ರಸ್ತೆಯ ಮಳೆಗಾಲುವೆ ಮಾಡುವ ಪರಿಸರ ಹಾನಿಯ ಕತೆಯಾದರೆ ನಗರ, ರಾಜ್ಯ, ದೇಶದಾದ್ಯಂತ ಸ್ಮಾರ್ಟ್ ಸಿಟಿ ಸ್ಕೀಮಿನಲ್ಲಿ ಆಡಳಿತ ಪಕ್ಷದ ಆಡಳಿತದಿಂದಾಗಿ ಆಗಬಹುದಾದ ನಾನ್-ಸ್ಮಾರ್ಟ್ ಬಗ್ಗೆ ಮಾತನಾಡಬೇಕಾದ ಕಾಂಗ್ರೆಸ್ ಪಕ್ಷ ಹೀಗೆ ಕಣ್ಣು ಮುಚ್ಚಿ ಕುಳಿತಿರುವ ಕಾರಣಕ್ಕೇ ಅದು ಇಂದಿನ ದುರ್ಗತಿಗೆ ಬಂದಿರುವುದು! ಇಂತಹ ತಾರ್ಕಿಕ ಕಾರಣಗಳಿಗೆ ಹೋರಾಡದೆ ಬರಿದೆ ಭಾವುಕ ಜೋಡೋ, ಬಾಡೋ, ತೋಡೋ ಮಾಡಿದರೆ ಸದ್ಗತಿಯಂತೂ ದೊರೆಯದು.

**- ರವಿ ಹಂಜ್, ದಾವಣಗೆರೆ.**

# ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆ ಮೇಲ್ದರ್ಜೆಗೆ ಅನುಮೋದನೆ



ಹೊನ್ನಾಳಿ, ಫೆ. 12- 100 ಹಾಸಿಗೆ ಇದ್ದ ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯನ್ನು 250 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಸಚಿವ ಸಂಪುಟದಲ್ಲಿ ಅನುಮೋದನೆ ದೊರೆ ತಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಆರೋಗ್ಯ ಸಚಿವ ಸುಧಾಕರ್ ಅವರನ್ನು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅಭಿನಂದಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಶಾಸಕರು, ಈ ಹಿಂದೆ 30 ಹಾಸಿಗೆ ಇದ್ದ ಸಾರ್ವಜನಿಕ ಆಸ್ಪತ್ರೆಯನ್ನು ಅಂದಿನ ಹಣಕಾಸು ಸಚಿವರು, ಉಪಮುಖ್ಯಮಂತ್ರಿ ಗಳಾಗಿದ್ದ ಬಿ. ಎಸ್. ಯಡಿಯೂರಪ್ಪನವರು ಹಾಗೂ ಆರೋಗ್ಯ ಸಚಿವರಾಗಿದ್ದ ಆರ್. ಅಶೋಕ್ ಅವರು 100 ಹಾಸಿಗೆ ಆಸ್ಪತ್ರೆಯನ್ನಾಗಿ ಎಂಟು ಕೋಟಿ ರೂಪಾಯಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಿದ್ದರು ಎಂದರು.

ಸಚಿವ ಸಂಪುಟ ಸಭೆಯಲ್ಲಿ 100 ಹಾಸಿಗೆ ಇದ್ದ ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯನ್ನು 250 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಮಾಡಲು ಸರ್ಕಾರ 23.50 ಕೋಟಿ ಅನುದಾನ ಬಿಡುಗಡೆ ಮಾಡಿ, ಅನುಮೋದನೆ ನೀಡಿದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಆಸ್ಪತ್ರೆಯಲ್ಲಿ ಒಂದು ಕೋಟಿ ವೆಚ್ಚದಲ್ಲಿ 23 ಐಸಿಯು ಬೆಡ್‌ಗಳನ್ನು ಸಿದ್ದಪಡಿಸಲಾಗುತ್ತಿದೆ. ಅಲ್ಲದೇ, ಒಂದು ಕೋಟಿ ರೂ. ವೆಚ್ಚದಲ್ಲಿ ಆಕ್ಸಿಜನ್ ಪ್ಲಾಂಟ್ ಹಾಗೂ ಐವತ್ತು ಲಕ್ಷ ವೆಚ್ಚದಲ್ಲಿ ಎಲ್‌ಎಂಓ ಪ್ಲಾಂಟ್ ನಿರ್ಮಾಣ ಮಾಡಲಾಗುತ್ತಿದೆ ಎಂದರು.

10 ಹಾಸಿಗೆ ಇದ್ದ ನ್ಯಾಮತಿ ತಾಲ್ಲೂಕು ಆಸ್ಪತ್ರೆಯನ್ನು ನಾಲ್ಕು ಕೋಟಿ ರೂ. ವೆಚ್ಚದಲ್ಲಿ 30 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿದ್ದು, ಈಗ 100 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ರೇಣುಕಾಚಾರ್ಯ ತಿಳಿಸಿದ್ದಾರೆ.

# ಪಡಿತರ ಹಮಾಲಿಗಳಿಂದ ನಾಡಿದ್ದು ಅನಿರ್ದಿಷ್ಟಾವಧಿ ಧರಣಿ

ದಾವಣಗೆರೆ, ಫೆ.12- ಸೇವಾ ಭದ್ರತೆ, ಕೂಲಿ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಇದೇ ದಿನಾಂಕ 15ರಿಂದ ಹಮ್ಮಿಕೊಂಡಿರುವುದಾಗಿ ಕರ್ನಾಟಕ ರಾಜ್ಯ ಲೋಡಿಂಗ್ ಅಂಡ್ ಅನ್ ಲೋಡಿಂಗ್ ಕಾರ್ಮಿಕರ ಒಕ್ಕೂಟ ತಿಳಿಸಿದೆ

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಒಕ್ಕೂಟದ ರಾಜ್ಯಾಧ್ಯಕ್ಷ ವರದರಾಜೇಂದ್ರ, ಪಡಿತರವನ್ನು ಗೋದಾಮುಗಳಿಂದ ರಾಜ್ಯಾದ್ಯಂತದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯ ಎತ್ತುವಳಿ, ಲೋಡಿಂಗ್ ಅನ್‌ಲೋಡಿಂಗ್ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರಿಗೆ ಹಲವಾರು ವರ್ಷಗಳಿಂದ ಕೂಲಿ ದರ ಹೆಚ್ಚಳ ಮಾಡಿಲ್ಲ ಎಂದು ಆರೋಪಿಸಿದರು.

ಕೂಲಿ ದರ ಹೆಚ್ಚಳ ಮಾಡಬೇಕು. ಗೋದಾಮುಗಳಲ್ಲಿ ನೀರು, ಶೌಚಾಲಯ ಸೇರಿದಂತೆ, ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಆಹಾರ ಇಲಾಖೆಯಿಂದಲೇ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸತೀಶ್ ಅರವಿಂದ್, ಹಳದಪ್ಪ, ಅಕ್ಬರ್, ರಮೇಶ್, ಆದಿಲ್ ಖಾನ್ ಉಪಸ್ಥಿತರಿದ್ದರು.

# ಮೂಲಭೂತ ಹಕ್ಕುಗಳು ಸಂವಿಧಾನದ ಕೊಡುಗೆ



ದಾವಣಗೆರೆ, ಫೆ. 12- ಭಾರತ ದೇಶವು ಗಣರಾಜ್ಯದ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿರುವ ದೇಶವಾಗಿದೆ. ನಮ್ಮ ದೇಶದ ಸಂವಿಧಾನ ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾದುದಾಗಿದೆ. ಇಂದು ನಾವು ಅನುಭವಿಸುತ್ತಿರುವ ಮೂಲಭೂತ ಹಕ್ಕುಗಳು ಸಂವಿಧಾನ ನೀಡಿರುವ ಕೊಡುಗೆಯಾಗಿದೆ. ಎಂದು ಕೆನರಾ ಬ್ಯಾಂಕಿನ ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಜಿ.ಜಿ.ದೊಡ್ಡಮನಿ ಹೇಳಿದರು.

ನಗರದ ಡಿ.ಸಿ.ಎಮ್. ಟೌನ್‌ಶಿಪ್‌ನಲ್ಲಿ ಕೆನರಾ ಬ್ಯಾಂಕಿನ ಲೀಡ್ ಬ್ಯಾಂಕ್ ಕಛೇರಿ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ವತಿಯಿಂದ ಜಂಟಿಯಾಗಿ ಆಯೋಜಿಸಿದ್ದ 74 ನೇ ಗಣರಾಜ್ಯೋತ್ಸವದಲ್ಲಿ ರಾಷ್ಟ್ರ ಧ್ವಜ ಅನಾವರಣಗೊಳಿಸಿ ಅವರು ಮಾತಾಡುತ್ತಿದ್ದರು.

ಕೆನರಾ ಬ್ಯಾಂಕಿನ ನೌಕರರ ಸಂಘದ ರಾಷ್ಟ್ರೀಯ ಸಹ ಖಜಾಂಚಿ ಕೆ.ರಾಘವೇಂದ್ರ ನಾಯರಿಯವರು ಮಾತನಾಡಿ, ಇಂದು ನಮ್ಮ ದೇಶದಲ್ಲಿ ವಿವಿಧ ಭಾಷೆ, ಧರ್ಮ, ಪಂಥ, ವಿಚಾರಧಾರೆಗಳು ಇದ್ದರೂ ದೇಶದ ಪ್ರಶ್ನೆ ಬಂದಾಗ ಏಕ ಸೂತ್ರದಡಿ ಸಾಗುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ಶಕ್ತಿಯಾಗಿದೆ. ಸಂವಿಧಾನದ ಆಶಯಗಳು ಕೇವಲ ಪುಸ್ತಕಗಳಲ್ಲಿ, ಭಾಷಣಗಳಲ್ಲಿ ಮಾತ್ರ ವಿಜೃಂಭಿಸಬಾರದು. ನಿಜ ಜೀವನದಲ್ಲೂ ಅಳವಡಿಕೆಯಾದಾಗ ಮಾತ್ರ ನಾವು ಸಂವಿಧಾನಕ್ಕೆ ಸಲ್ಲಿಸುವ ಶ್ರೇಷ್ಠ ಗೌರವವಾಗಲಿದೆ ಎಂದರು.

ಕೆನರಾ ಬ್ಯಾಂಕಿನ ಲೀಡ್ ಬ್ಯಾಂಕ್ ಕಛೇರಿಯ ಸಿಬ್ಬಂದಿಗಳಾದ ಸುಧೀರ್ ರೆಡ್ಡಿ, ಮೂರ್ತಿ ನಾಯ್ಕ್, ಅನಿಲ್, ಶ್ರೀಧರ, ನಂಜುಂಡ ಉಪಸ್ಥಿತರಿದ್ದರು.

## ತಿದ್ದುಪಡಿ

ದಿನಾಂಕ 12.02.2023ರ ಭಾನುವಾರದ 'ಜನತಾವಾಣಿ' ಕನ್ನಡ ದಿನಪತ್ರಿಕೆಯ 3ನೇ ಪುಟದಲ್ಲಿ ಪ್ರಕಟಣೆಗೊಂಡಿರುವ **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್** ಲಿ., ಕುಂದುವಾಡ ರಸ್ತೆ, ದಾವಣಗೆರೆ. ಈ ಸಂಘಕ್ಕೆ ಸಂಬಂಧಿಸಿದ **ಸಾರ್ವಜನಿಕ ಪ್ರಕಟಣೆ - ಸ್ಥಿರಾಸ್ತಿಗಳ ಬಹಿರಂಗ ಹರಾಜು ನೋಟಿಸ್** ಪ್ರಕಟಣೆಯಲ್ಲಿನ ಕ್ರಮ ಸಂಖ್ಯೆ 3ರ ಶ್ರೀ ಶಿವಮೂರ್ತಿ ಎಂ.ವಿ., ಬಸವರಾಜಪ್ಪ ಎ.ಎಂ. ಮತ್ತು ಹಾಲಮ್ಮ # 13/1, ಮಹಾರಾಜಪೇಟೆ, ದಾವಣಗೆರೆ ಇವರಿಂದ ಬಾಕಿಯಾಗಿರುವ ಸಾಲದ ಅಸಲು ಮತ್ತು ಬಡ್ಡಿ ಹಾಗೂ ಇತರೆ ಖರ್ಚು ದಿನಾಂಕ 31.01.2023ಕ್ಕೆ ರೂ. 5,064/- ಹಾಗೂ ಮುಂದಿನ ಬಡ್ಡಿ + ಇತರೆ ಖರ್ಚು ಎಂದಾಗಿದ್ದು, ಅದನ್ನು **ರೂ. 5,06,764/-** ಹಾಗೂ ಮುಂದಿನ ಬಡ್ಡಿ + ಇತರೆ ಖರ್ಚು ಎಂದು ತಿದ್ದುಕೊಂಡು ಓದಿಕೊಳ್ಳತಕ್ಕದ್ದು.

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು**

ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ದಾವಣಗೆರೆ.

ಸನ್‌ಶೈನ್ ಪುರಂತರ ಹಾಸ್ಪಿಟಲ್
SUNSHINE PURANTAR HOSPITAL
3rd Main, MCC 'A' Block, Davangere - 577 002.
REQUIREMENT
1. Marketing Executive - 3
2. Insurance Coordinator - 2
3. Receptionist - 2
4. Accountant - 2
5. Nursing (Ward + OT ) - 9
Attractive salary Based on Eligibility & Experience
Apply with : Biodata, Recent Colour Photo, Address Proof, Degree Certificate.
ಉಚಿತ ವಸತಿ ಸೌಲಭ್ಯವಿರುತ್ತದೆ.
SUNSHINE
PURANTARA HOSPITAL
CONTACT : 78378 63786, 88846 34545

# ಸಾಹಿತ್ಯವನ್ನು ಪಾಮರರ ಸೊತ್ತಾಗಿಸಿದ ಕೀರ್ತಿ ವಚನಕಾರರದ್ದು



**ಲೇಖಕರಾದ ಶ್ರೀಮತಿ ಎಂ.ಎಸ್. ಮಂಜುಳಾ ಮಂಜಪ್ಪ ಅವರ 'ಹೆಜ್ಜೆಯ ಗುರುತು' ಹಾಗೂ ಸಮಕಾಲೀನ ವಚನಧಾರೆ' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ವಿಶ್ರಾಂತ ಪ್ರಾಚಾರ್ಯ ಡಾ. ನಾ. ಲೋಕೇಶ್ ಒಡೆಯರ್**

ದಾವಣಗೆರೆ, ಫೆ. 12- ಪಂಡಿತರ ಸೊತ್ತಾಗಿದ್ದ ಸಾಹಿತ್ಯವನ್ನು ಪಾಮರರ (ಸಾಮಾನ್ಯರ) ಸೊತ್ತಾಗಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಮುಂದೆ ಹರಿದಾಸರು ಕೂಡ ಕೀರ್ತನೆಗಳ ಮೂಲಕ ಸಾಹಿತ್ಯವನ್ನು ಸಾಮಾನ್ಯರ ಮನಮುಟ್ಟುವಂತೆ ರಚಿಸಿದರು. ಸಾಹಿತ್ಯ ಪ್ರಕಾರಗಳು ಕಾಲ ಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ. ಅನುಭವದಿಂದ ಆಡಿದ ಮಾತೇ ಸಾಹಿತ್ಯ ಎಂದು ವಿಶ್ರಾಂತ ಪ್ರಾಚಾರ್ಯ ಡಾ. ನಾ. ಲೋಕೇಶ್ ಒಡೆಯರ್ ಹೇಳಿದರು.

ನಗರದ ಮಾಗನೂರು ಬಸಪ್ಪ ಶಾಲಾ ಸಭಾಂಗಣದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಶಾಖೆ, ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ಹಾಗೂ ಮಿಂಚು ಪ್ರಕಾಶನ ಇವರ ಸಂಯುಕ್ತಾಶ್ರಯದಲ್ಲಿ ಲೇಖಕರಾದ ಶ್ರೀಮತಿ ಎಂ.ಎಸ್. ಮಂಜುಳಾ ಮಂಜಪ್ಪ ಅವರ 'ಹೆಜ್ಜೆಯ ಗುರುತು' ಹಾಗೂ ಸಮಕಾಲೀನ ವಚನಧಾರೆ' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಕೃತಿಗಳ ಕುರಿತು ಆಶಯ ನುಡಿಗಳನ್ನಾಡಿದರು.

ನವೋತ್ತರದ ಸಾಹಿತ್ಯ ಶ್ರೀ ಸಾಮಾನ್ಯರ ತಲುಪುವಲ್ಲಿ ಅಗಾಧ ಪರಿಣಾಮ ಉಂಟುಮಾಡಿದೆ. ವಚನಕಾರರ ಪ್ರಭಾವ ಆಧುನಿಕ ಸಾಹಿತಿಗಳ ಮೇಲೆ ಬಹಳವಾಗಿದೆ. ಅದರ ಮಾರ್ಗಗಳನ್ನು ಅನುಸರಿಸಿ, ಅನೇಕ ವಚನಗಳನ್ನು ಬರೆಯುತ್ತಿದ್ದಾರೆ. ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುತ್ತಾ ಗದ್ಯದಂತಿರುವ ಚೌಪದಿ, ತ್ರಿಪದಿಗಳನ್ನು ಮುಕ್ತ ಛಂದಸ್ಸಿನಲ್ಲಿ ಬರೆಯುತ್ತಿದ್ದಾರೆ. ಕವಯತ್ರಿ ಮಂಜುಳಾ ಅವರು ನಾಲ್ಕು ಸಾಲಿನಲ್ಲಿ ಮೂರು ಸಾಲಿನಲ್ಲಿ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲುವ ರೀತಿಯಲ್ಲಿ ಕವನ ರಚಿಸಿದ್ದಾರೆಂದು ಹೇಳಿದರು.

ಇವರು ಬರೆದಿರುವ ವಚನಗಳನ್ನು ಓದುವುದರ ಮೂಲಕ ನಮ್ಮ ಓರೆಕೋರೆಗಳನ್ನು ತಿದ್ದಿಕೊಳ್ಳಲು ಓದುಗರಿಗೆ ಸಾಧ್ಯವಿದೆ. ಒಟ್ಟಾರೆ ಇವರು ಬರೆದಿರುವ ವಚನಗಳು ಗಂಭೀರ ಆಲೋಚನೆಗೆ ತೊಡಗಿಸು ವಂತಿದೆ. ಮಂಜುಳ ಎಂಬ ಪದಕ್ಕೆ ಮಧುರವಾದ, ಸುಂದರವಾದ ಅರ್ಥವಿದೆ. ಮಂಜುಳ ಮಂಜಪ್ಪ ರಚನೆಯ ವಚನಗಳು ಲಲಿತವಾಗಿ, ಮಧುರವಾಗಿವೆ. ಆಧುನಿಕ ವಚನಕಾರರ ಸಾಲಿನಲ್ಲಿ ಇವರಿಗೂ ಸ್ಥಾನವಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಮಾತನಾಡಿ, ಕಾವ್ಯ ಸೃಷ್ಟಿಗೆ ಪ್ರತಿಭೆ ಜೊತೆಗೆ ಸತತ ಅಭ್ಯಾಸ ಇರಬೇಕು. ಕಾವ್ಯ ನಮ್ಮನ್ನು ಸನ್ಮಾರ್ಗದ ಕಡೆ ಕೊಂಡೊಯ್ಯುವ ಕೆಲಸ ಮಾಡಬೇಕಾಗಿದೆ ಎಂದರು.

ಯಾರು ಕ್ರಿಯಾಶೀಲರಾಗಿರುತ್ತಾರೋ ಅವರು ಮಾಧ್ಯಮ, ಅಕ್ಷರಗಳ ಮೂಲಕ ಪ್ರತಿಕ್ರಿಯೆ ಕೊಟ್ಟೇ ಕೊಡುತ್ತಾರೆ. ಸುಸ್ಥಿರ ಸಮಾಜ ನಿರ್ಮಾಣವನ್ನು ಸಾಹಿತ್ಯದಿಂದ ಮಾಡಬೇಕಾಗಿದೆ ಎಂದು ಹೇಳಿದರು.

ಮಂಜುಳ ನಿವೃತ್ತರಾದ ಮೇಲೆ ಸಾಹಿತ್ಯ ಕೃಷಿಯತ್ತ ಮುಖಮಾಡಿದ್ದು, ತೆರೆದ ಕಣ್ಣಿನಿಂದ ಸಮಾಜವನ್ನು ನೋಡಿ, ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ವನ್ನು ಸಾಹಿತ್ಯದ ಮೂಲಕ ಮಾಡುತ್ತಿದ್ದಾರೆ ಎಂದರು.

ಕೃತಿ ಕುರಿತು ಸಾಹಿತಿ, ಜಾನಪದ ವಿದ್ವಾಂಸರೂ ಆದ ಡಾ. ಬಸವರಾಜ ನೆಲ್ಲಿಸರ ಕೃತಿಗಳ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಎಸ್.ಎಸ್. ಮಲ್ಲಮ್ಮ ಮಾತನಾಡಿದರು.

ಸಾಹಿತಿ ಮಂಜುಳಾ ಮಂಜಪ್ಪ, ಡಾ. ಎಸ್. ಮಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮಂಜುಳಾ ಪ್ರಾರ್ಥಿಸಿದರು. ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಅನ್ನಪೂರ್ಣ ಪಾಟೀಲ್ ಸ್ವಾಗತಿಸಿದರು. ಶ್ರೀಮತಿ ಮಮತಾ ನಾಗರಾಜ್ ನಿರೂಪಿಸಿದರು. ನಟರಾಜ್, ಸಿದ್ಧಪ್ಪ ಸಾರಥಿ ಕೃತಿಕಾರರ ಕುರಿತು ಮಾತನಾಡಿದರು.

# ಇಂದು ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ



ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಇಂದು ಸಂಜೆ 5 ಕ್ಕೆ ದಾವಣಗೆರೆಯ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ 44 ನೇ ವರ್ಷದ ಸಮಗ್ರ ಪಾದಯಾತ್ರಿಗಳಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿದೆ.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಅಯ್ಯನಹಳ್ಳಿ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಮಹಾಲ್ ಮಠದ ಶ್ರೀ ಶಂಕರ ಸ್ವಾಮೀಜಿ, ಕೋಣಂದೂರಿನ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಜ್ಯೋತಿ ಬೆಳಗಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮ ಚಂದ್ರ, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್ ಭಾಗವಹಿಸಲಿದ್ದಾರೆ ಎಂದು ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

**ಪಾದಯಾತ್ರಿಗಳಿಗೆ ನೀರಿನ ವ್ಯವಸ್ಥೆ :** ಕೊಟ್ಟೂರು ಗುರು ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ತೆರಳುವ ಪಾದಯಾತ್ರಿಗಳಿಗೆ ಇಂದು ಶಾಮನೂರಿನ ಪ್ರಕಾಶ್ ಅವರು ಶಾಮನೂರು ಮತ್ತು ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ.

# ಆವರಗೊಳ್ಳದಲ್ಲಿ ಇಂದು ಕಂಕಣ ವಿಸರ್ಜನೆ ಕಾರ್ಯಕ್ರಮ

ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಿದ್ದು, ಇಂದು ಕಂಕಣ ವಿಸರ್ಜನೆ ಕಾರ್ಯಕ್ರಮ ನಡೆಯಲಿದೆ.

## ಕೈಲಾಸ ಶಿವಗಣಾರಾಧನೆ



ದಿ|| ಶ್ರೀ ಪಾಪಣ್ಣ

ದಾವಣಗೆರೆ ತಾಲ್ಲೂಕು ಶಾಮನೂರು ವಾಸಿ ಶ್ರೀ ಲಿಂಗರಾಜು ಪಿ. ಮತ್ತು ಶ್ರೀ ನಾಗರಾಜ್ ಪಿ. ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ: 01-02-2023ನೇ ಬುಧವಾರ ಬೆಳಿಗ್ಗೆ 5.00 ಗಂಟೆಗೆ ನನ್ನ ಪೂಜ್ಯ ತಂದೆಯವರಾದ

**ಶ್ರೀ ಪಾಪಣ್ಣ**

(ಕರ್ನಾಟಕ ರಾಜ್ಯ ಪ್ರಶಸ್ತಿ ವಿಜೇತರು, ಮೃದಂಗ ಕಲಾವಿದರು)

ಇವರು ಶಿವಧೀನಾರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ: 13-02-2023ನೇ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಶಾಮನೂರಿನ ಮೃತರ ಸ್ವ-ಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು**

ಶ್ರೀಮತಿ ನಿರ್ಮಲಮ್ಮ ಮತ್ತು ಶ್ರೀ ಲಿಂಗರಾಜು ಪಿ. ಮತ್ತು ಶ್ರೀಮತಿ ವನಜಾಕ್ಷಮ್ಮ ಮತ್ತು ಶ್ರೀ ನಾಗರಾಜ್ ಪಿ. ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗು ಚಿಕ್ಕಣ್ಣರ್ ವಂಶಸ್ಥರು, ಶಾಮನೂರು ಗ್ರಾಮಸ್ಥರು, ಕೊಂಡಜ್ಜಿ ಗ್ರಾಮಸ್ಥರು ಹಾಗು ಬಂಧು-ಮಿತ್ರರು.

## ಎರಡನೇ ವರ್ಷದ ಪುಣ್ಯ ಸ್ಮರಣೆ



**ಶ್ರೀ ಸಣ್ಣ ಗೌಡ್ರ ಭೀಮಪ್ಪನವರು**

ನಿಧನ : 13.02.2021

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ನೀವು ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ
ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಪುಷ್ಪ
ಮಗಳು-ಅಳಿಯ : ಶ್ರೀಮತಿ ಸ್ಮಿತಾ ಶ್ರೀ ಹೆಚ್.ಎಸ್. ಕಿರಣ್
ಮೊಮ್ಮಗ ಚಿ|| ಷಮಂತ್ ಎಸ್.ಕೆ
ಶ್ಯಾಬನೂರು ಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು.
ಫೋನ್ : 97408 67411

## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ. ಶ್ರೀಮತಿ ಎಸ್.ಕೆ. ಶಾಂತಮ್ಮನವರು**

ಭೌತಿಕವಾಗಿ ನೀವು ನಮ್ಮೊಂದಿಗಿಲ್ಲವಾದರೂ ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತಿ : ಕೃಷ್ಣಪ್ಪ ಸಾರಥಿ
ಪುತ್ರಿ : ಡಾ. ಎಸ್.ಕೆ. ನಾಗವೇಣಿ ಮಂಜುನಾಥ್ ಕೆ.ಹೆಚ್.
ಮೊಮ್ಮಕ್ಕಳು : ಕು. ಅಕ್ಷತಾ ಕೆ.ಎಂ. ಚಿ. ಚೇತನ್ ಕುಮಾರ್ ಕೆ.ಎಂ. ಹಾಗೂ ಸಾರಥಿ ಬಂಧು-ಮಿತ್ರರು.


ಭಾರತ ಸರ್ಕಾರ | G20 | ಕರ್ನಾಟಕ ಸರ್ಕಾರ | ಸ್ವಾತಂತ್ರ್ಯದ ಅಮೃತಮಹೋತ್ಸವ | ನವ ಭಾರತಕ್ಕಾಗಿ ನವ ಕರ್ನಾಟಕ


ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವದಲ್ಲಿ ಏರೋಸ್ಪೇಸ್ ಹಾಗೂ ರಕ್ಷಣಾ ಉತ್ಪಾದನೆಯಲ್ಲಿ ಕರ್ನಾಟಕದ ಸಾಮರ್ಥ್ಯ ಹೆಚ್ಚಳ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

**ಏರೋ ಇಂಡಿಯಾ 2023**
ಕೋಟ್ಯಂತರ ಅವಕಾಶಗಳ ರನ್‌ವೇ
ಭಾರತದ ಏರೋಸ್ಪೇಸ್ ಹಾಗೂ ರಕ್ಷಣಾ ಕ್ಷೇತ್ರಗಳ ಬೆಳವಣಿಗೆಯ ಶಕ್ತಿಪ್ರದರ್ಶನ





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

2023 - ಭಾರತದ ಜಿ20 ಅಧ್ಯಕ್ಷತೆಯ ವರ್ಷ
(ಡಿಸೆಂಬರ್ 1, 2022 - ನವೆಂಬರ್ 30, 2023)

13-17 ಫೆಬ್ರವರಿ 2023
ಏರೋ ಇಂಡಿಯಾ 2023 - 14ನೇ ಏರೋ ಶೋ
ಏರ್ ಫೋರ್ಸ್ ಸ್ಟೇಷನ್, ಯಲಹಂಕ, ಬೆಂಗಳೂರು
ಹಾಲ್ 'ಇ'ನಲ್ಲಿ ಕರ್ನಾಟಕ ಸರ್ಕಾರದ ಪೆವಿಲಿಯನ್‌ಗೆ ಭೇಟಿ ನೀಡಿ

2023 AERO INDIA

**ಅತಿದೊಡ್ಡ ಏರೋ ಇಂಡಿಯಾ**

| | ಏರೋ ಇಂಡಿಯಾ-21 | ಏರೋ ಇಂಡಿಯಾ-23 |
|---|---|---|
| ವಸ್ತುಪ್ರದರ್ಶನ ವಿಸ್ತೀರ್ಣ | 23,000 ಚ.ಮೀ | 35,000 ಚ.ಮೀ |
| ಪ್ರದರ್ಶಕರ ಸಂಖ್ಯೆ | 600 | 809 |
| ವಿದೇಶೀ ರಾಷ್ಟ್ರಗಳು | 55 | 98 |

**ಕರ್ನಾಟಕ - ಭಾರತದ ಏರೋಸ್ಪೇಸ್ ಉದ್ಯಮದ ಮುಂಚೂಣಿಯಲ್ಲಿ**

- 2022-27ರ ಏರೋಸ್ಪೇಸ್ ಹಾಗೂ ರಕ್ಷಣಾ ನೀತಿಗಳೊಂದಿಗೆ ಆಕರ್ಷಕ ಉತ್ತೇಜನಗಳು
- ವಿದೇಶಿ ನೇರ ಹೂಡಿಕೆ ಆಕರ್ಷಣೆಯಲ್ಲಿ ಅಗ್ರ ಸ್ಥಾನದಲ್ಲಿರುವ ವಿಶ್ವದ ಮೂರು ಏರೋಸ್ಪೇಸ್ ಕೇಂದ್ರಗಳಲ್ಲಿ ಬೆಂಗಳೂರು ಸಹ ಒಂದು.
- ಕರ್ನಾಟಕದಲ್ಲಿ ಭಾರತದ ಶೇ.67ರಷ್ಟು ರಕ್ಷಣಾ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳ ಉತ್ಪಾದನೆ
- ಭಾರತದ ಒಟ್ಟು ಏರೋಸ್ಪೇಸ್ ಹಾಗೂ ರಕ್ಷಣಾ ರಫ್ತಿನಲ್ಲಿ ಕರ್ನಾಟಕದ ಕೊಡುಗೆ ಶೇ.65
- ಭಾರತದ ವಿಮಾನ ಹಾಗೂ ಬಾಹ್ಯಾಕಾಶ ನೌಕೆಗಳ ಒಟ್ಟು ಉದ್ಯಮದ ಪೈಕಿ ನಾಲ್ಕನೇ ಒಂದು ಭಾಗ ಕರ್ನಾಟಕದಲ್ಲಿದೆ.



**ಹೆಚ್‌ಎಎಲ್‌ನ ಎಲ್‌ಸಿಎ-ತೇಜಸ್ ವಿಮಾನ**

- ಸಂಪೂರ್ಣ ಕಾರ್ಯಾಚರಣಾ ಸಾಮರ್ಥ್ಯ (ಎಫ್‌ಓಸಿ) ಸಂರಚನೆಯಲ್ಲಿ ಎಲ್‌ಸಿಎ-ತೇಜಸ್ ವಿಮಾನ-ಇಂಡಿಯಾ ಪೆವಿಲಿಯನ್ 2023ರ ಕೇಂದ್ರಬಿಂದು
- ಫಿಕ್ಸ್ಡ್ ವಿಂಗ್ ಕ್ಷೇತ್ರದಲ್ಲಿ ಭಾರತದ ಬೆಳವಣಿಗೆಯನ್ನು ಪ್ರದರ್ಶಿಸಲು ಫಿಕ್ಸ್ಡ್ ವಿಂಗ್ ಪ್ಲಾಟ್‌ಫಾರಂ ವಿಷಯಧಾರಿತ ವಿಶೇಷ ಭಾರತೀಯ ಪೆವಿಲಿಯನ್

**ಪ್ರಮುಖ ವೈಶಿಷ್ಟ್ಯತೆಗಳು**

- ತನ್ನ ವರ್ಗದಲ್ಲಿ ಅತ್ಯಂತ ಸಣ್ಣ ಹಾಗೂ ಹಗುರವಾದ ವಿಮಾನ
- ಉತ್ಕೃಷ್ಟ ಹಾರಾಟ ಸುರಕ್ಷತಾ ದಾಖಲೆ
- ನಾಲ್ಕು ರೂಪಾಂತರಗಳಲ್ಲಿ ಲಭ್ಯ
- ಕನಿಷ್ಠ ರಾಡಾರ್ ಕ್ರಾಸ್-ಸೆಕ್ಷನ್‌ನೊಂದಿಗೆ ಎಲ್ಲಾ ಎತ್ತರಗಳಲ್ಲಿಯೂ ಶಬ್ದಾತೀತ
- ಮುಕ್ತ ವಿನ್ಯಾಸದೊಂದಿಗೆ ಕಸ್ಟಮೈಸ್ಡ್ ಶಸ್ತ್ರಾಸ್ತ್ರ ಏಕೀಕರಣ
- ಕಡಿಮೆ ಕಾರ್ಯಾಚರಣಾ ವೆಚ್ಚಗಳೊಂದಿಗೆ ನಿರ್ವಹಣೆ-ಸ್ನೇಹಿ



**ಕರ್ನಾಟಕ - ಹೂಡಿಕೆಯ ಪ್ರಮುಖ ತಾಣ**

- ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ರೂ.52,000 ಕೋಟಿ ಮೊತ್ತದ ಒಪ್ಪಂದಗಳಿಗೆ ಸಹಿ
- ನವೆಂಬರ್ 2022ರಲ್ಲಿ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರೂ.9.8 ಲಕ್ಷ ಕೋಟಿ ಮೊತ್ತದ ಒಪ್ಪಂದಗಳಿಗೆ ಕರ್ನಾಟಕ ಸರ್ಕಾರದ ಸಹಿ. ಈ ಒಪ್ಪಂದಗಳು 6 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ. ಈ ಪೈಕಿ ಶೇ.90ರಷ್ಟು ಹೂಡಿಕೆಗಳನ್ನು ಬೆಂಗಳೂರಿನ ಹೊರಗಿನ ಸ್ಥಳಗಳಲ್ಲಿ ಮಾಡಲಾಗುತ್ತಿದೆ.
- ಜಿಎಸ್‌ಟಿ ಸಂಗ್ರಹಣೆಯಲ್ಲಿ ದೇಶದಲ್ಲಿಯೇ ಅತಿ ಹೆಚ್ಚಿನ ಬೆಳವಣಿಗೆ ದರ
- ನೀತಿ ಆಯೋಗದ ನಾವೀನ್ಯ ಸೂಚ್ಯಂಕದಲ್ಲಿ ಸತತವಾಗಿ 3 ಬಾರಿ ಕರ್ನಾಟಕಕ್ಕೆ ಅಗ್ರ ಸ್ಥಾನ
- 2020ರಲ್ಲಿ ಡಿಪಿಐಐಟಿಯ ಈಸ್-ಆಫ್-ಡೂಯಿಂಗ್ ಬ್ಯುಸಿನೆಸ್‌ನಲ್ಲಿ ನಂ. 1 ಪಟ್ಟ
- 17ನೇ ಸ್ಥಾನದಿಂದ 'ಅತ್ಯುತ್ತಮ ಸಾಧಕ' ಸ್ಥಾನಕ್ಕೆ ಏರಿಕೆ

**ಕೈಗಾರಿಕಾ ನೀತಿ 2020-2025**

- ವಿವಿಧ ವಲಯಗಳಲ್ಲಿ ಟರ್ನ್‌ಓವರ್-ಆಧಾರಿತ ಪ್ರೋತ್ಸಾಹ (ಪಿಎಲ್‌ಐ ಯೋಜನೆ)
- ನಿರ್ದಿಷ್ಟವಾದ ವಲಯಗಳನ್ನು ಪ್ರೋತ್ಸಾಹಿಸಲು ಕ್ಲಸ್ಟರ್-ಆಧಾರಿತ ಉದ್ಯಮಗಳಿಗೆ ಉತ್ತೇಜನ
- ಸಮಗ್ರ ಕೈಗಾರಿಕಾ ಅಭಿವೃದ್ಧಿಗಾಗಿ 'ಬಿಯಾಂಡ್ ಬೆಂಗಳೂರು' ಯೋಜನೆ
- ಒಂದು ಜಿಲ್ಲೆ-ಒಂದು ಉತ್ಪನ್ನ: 'ಆತ್ಮ ನಿರ್ಭರ ಭಾರತ' ಯೋಜನೆಯಡಿ 2 ಹಾಗೂ 3ನೇ ಶ್ರೇಣಿ ನಗರಗಳಲ್ಲಿ ಉದ್ಯಮಗಳಿಗೆ ಒತ್ತು

**ಹೂಡಿಕೆಗೆ ಕರ್ನಾಟಕ ಏಕೆ ಉತ್ತಮ ರಾಜ್ಯ?**

ಕೈಗಾರಿಕಾ-ಸ್ನೇಹಿ ನೀತಿಗಳು | ದಕ್ಷ ಲಾಜಿಸ್ಟಿಕ್ ನೆಟ್‌ವರ್ಕ್‌ನೊಂದಿಗೆ ಭೂಮಿಯ ಲಭ್ಯತೆ | ಸುಲಲಿತ ವ್ಯವಹಾರ (ಈಸ್ ಆಫ್ ಡೂಯಿಂಗ್ ಬಿಸಿನೆಸ್) | ಹೆಚ್ಚು ಕೌಶಲ್ಯವುಳ್ಳ ಹಾಗೂ ತರಬೇತಿ ಹೊಂದಿರುವ ಮಾನವ ಸಂಪನ್ಮೂಲ | ಉತ್ತಮ ಮೂಲಭೂತ ಸೌಕರ್ಯ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte